ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಒಳಗೇನಿದೆ....

ಸಂಪುಟ 8 | ಸಂಚಿಕೆ 14 | ಏಪ್ರಿಲ್ 6, 1986 | ಬೆಲೆ 60 ಪೈಸೆ

ಸಿ. ಐ. ಟಿ. ಯು. ಕೇಂದ್ರ ಮಂಡಲಿ ಕರೆ

ವಿಶ್ವಶಾಂತಿ ಸಾಧನೆಗಾಗಿ, ಉದ್ಯೋಗದ ಹಕ್ಕಿಗಾಗಿ ಹೋರಾಡಿ

ಮಾರ್ಚ್ 31 ರಿಂದ ಏಪ್ರಿಲ್ 2ರ ವರೆಗೆ ಕಲ್ಕತ್ತಾದಲ್ಲಿ ನಡೆದ ಸಿ.ಐ.ಟಿ.ಯು. ಕೇಂದ್ರ ಮಂಡಳಿ ಸಭೆಯಲ್ಲಿ ಮೊಳಗಿದ ಸಮರಧೀರ ಕರೆ ಇದು. ನೂರು ವರ್ಷದ ಹಿಂದೆ ಪ್ರಪಂಚದಲ್ಲೆಲ್ಲಾ ಕಾರ್ಮಿಕರನ್ನು ಹೋರಾಟ ರಂಗಕ್ಕಿಳಿಸಿದ, ಕಾರ್ಮಿಕರ ಅಪೂರ್ವ ತ್ಯಾಗ ಬಲಿದಾನಗಳಿಗೆ ಸ್ಪೂರ್ತಿ ನೀಡಿದ "8 ಗಂಟೆಗಳ ಕೆಲಸ" ಎಂಬ ಮೇ ದಿನದ ಸಮರಧೀರ ಕರೆಗೆ ಸಂವಾದಿಯಾಗಿ "ಶಾಂತಿ ಮತ್ತು ಉದ್ಯೋಗ" ಎಂಬ ಕಹಳೆಯನ್ನು ಡಬ್ಲ್ಯು.ಎಫ್.ಟಿ.ಯು. ಮುಂದಿನ ಮೇ ದಿನದಂದು ವಿಶ್ವಾದ್ಯಂತ ಮೊಳಗಿಸಲು ಕರೆ ನೀಡಿದೆ. ಈ ಕರೆಗೆ ಭಾರತದ ಕಾರ್ಮಿಕ ವರ್ಗದ ಅವರ ಸಮರಧೀರ ನಾಯಕ ಸಂಘಟನೆ ಸಿಐಟಿಯುವಿನ ಪ್ರತಿಧ್ವನಿಯಿದು. ಈ ಪ್ರತಿಧ್ವನಿ ಭಾರತ ಕಾರ್ಮಿಕ ಕೇಂದ್ರಗಳಲ್ಲೆಲ್ಲಾ ಮೊಳಗಿ ಮಾರ್ದನಿಸಬೇಕು.

ಸೋವಿಯೆತ್ ಕಾರ್ಮಿಕ ಸಂಘಗಳ ಒಕ್ಕೂಟದ ಕರೆ

ಕೇಂದ್ರ ಮಂಡಳಿಯ ಸಭೆಯನ್ನು ಉದ್ಘಾಟಿಸಿದ ಸಿಐಟಿಯು ಅಧ್ಯಕ್ಷ ಕಾ| ಬಿ.ಟಿ. ರಣದಿವೆಯವರು, ಜಾಗತಿಕ ರಂಗದಲ್ಲಿ ಇತ್ತೀಚಿನ ತಿಂಗಳುಗಳ ಮಹತ್ವದ ಸಾಧನೆ ಸಿ.ಪಿ.ಎಸ್.ಯು ವಿನ 27ನೇ ಮಹಾಧಿವೇಶನ. 2000 ದ ವೇಳೆಗೆ ಅಣ್ವಸ್ತ್ರ ರಹಿತ ವಿಶ್ವಕ್ಕಾಗಿ ಕಾ| ಗೊರ್ಬಾಚೆವ್‌ರವರು ಕರೆ ನೀಡಿದ್ದಾರೆ. ಸೋವಿಯತ್ ಒಕ್ಕೂಟದ ಕಾರ್ಮಿಕ ಸಂಘಗಳ ಒಕ್ಕೂಟ ಎಯು ಸಿ.ಸಿ.ಟಿ.ಯು, ತನ್ನ 137 ದಶಲಕ್ಷ ಸದಸ್ಯರ ಪರವಾಗಿ ಎಲ್ಲ ದೇಶಗಳ ಕೆಲಸಗಾರರಿಗೆ; ಎಲ್ಲ ಕಾರ್ಮಿಕ ಸಂಘಗಳಿಗೆ, ಈ ಕರೆಗೆ ಎಲ್ಲಾ ಬೆಂಬಲ ನೀಡಲು ಮನವಿ ಮಾಡಿದೆ ಮುಂದಿನ ಬೆಳವಣಿಗೆಗಳು ಯುದ್ಧಾಪಾಯದ ವಿರುದ್ಧ ರಣರಂಗದಲ್ಲಿನ ಸೈನ್ಯ ಎಷ್ಟು ಐಕ್ಯವಾಗಿ ಒಗ್ಗಟ್ಟಿನಿಂದ ಹೋರಾಡುತ್ತದೆ ಎಂಬುದರ ಮೇಲೆ ಅವಲಂಬಿಸಿದೆ. ಯುದ್ಧದ ಬೆದರಿಕೆಯ ವಿರುದ್ಧ, ಶಾಂತಿಯನ್ನು ರಕ್ಷಿಸುವ ಹೋರಾಟದ ವಿಷಯದಲ್ಲಿ ಎಲ್ಲಾ ವ್ಯತ್ಯಾಸಗಳನ್ನೂ ಬದಿಗಿಡಬೇಕು ತಮ್ಮನ್ನು ವಿಭಜಿಸುವ ಎಲ್ಲ ಅಂಶಗಳನ್ನು ದೂರವಾಗಿಸಬೇಕು ಎಂದು ಈ ಮನವಿ ಹೇಳಿದೆ ಎಂದರು.

ಈ ಮನವಿಗೆ ಉತ್ತರವಾಗಿ ಸಿ.ಐ.ಟಿಯು. ವಿನ ನಿರ್ಣಯವನ್ನು ಕಾ| ಜ್ಯೋತಿಬಸು ಮಂಡಿಸಿದರೆ ಕಾ| ಬಾಲಾನಂದನ್ ಅನುಮೋದಿಸಿದರು.

ಪ್ರಜ್ಞೆಯನ್ನು ವಿಸ್ತರಿಸುವ ದಿನಾಚರಣೆಗಳು

ಮೇ 11- ರಾಷ್ಟ್ರೀಯ ಸಮಗ್ರತೆಯ ಆಚರಣೆ - ದೇಶವಿಭಜಕ, ಕೋಮುವಾದಿ ಶಕ್ತಿಗಳ ವಿರುದ್ಧ

ಮೇ 21 - "ಸಾರ್ವಜನಿಕ ವಲಯವನ್ನು ರಕ್ಷಿಸಿ" ದಿನಾಚರಣೆ.

ಮೇ 22 - ನಿರುದ್ಯೋಗ ವಿರುದ್ಧ ದಿನಾಚರಣೆ (ಕರ್ನಾಟಕದಲ್ಲಿ.)

ಜೂನ್ 16 - ದ. ಆಫ್ರಿಕದ ವರ್ಣ ವಿದ್ವೇಷದ ವಿರುದ್ಧ ದಿನಾಚರಣೆ

ಕಾಂ. ಬಿ.ಟಿ. ಆರ್‌ರವರು ಬೆಂಗಳೂರಿನಲ್ಲಿ ಮೇ 21 ರಂದ ಸಾರ್ವಜನಿಕ ವಲಯವನ್ನು ರಕ್ಷಿಸಿ ದಿನಾಚರಣೆಗೆ ಹಾಗೂ ಮೇ 22 ರಂದು ನಿರುದ್ಯೋಗ ವಿರುದ್ಧ ದಿನಾಚರಣೆಗೆ ಆಗಮಿಸುತ್ತಾರೆಂದು, ಮೇಲಿನ ಎಲ್ಲಾ ದಿನಾಚರಣೆಗಳ ಬಗ್ಗೆ ಸುದ್ದಿ ನೀಡಿದ ಕಾಂ| ಸೂರಿಯವರು ತಿಳಿಸಿದ್ದಾರೆ.

ಕಾರ್ಮಿಕ ಸಂಘಗಳ ಅತ್ಮಪೂರ್ವ ಪ್ರಯತ್ನ

ಕಾ| ಬಿ.ಟಿ. ಆರ್ ರವರು, ಇತ್ತೀಚೆಗೆ ಇಂಟಕ್, ಯುದ್ಧದ ಪ್ರಕ್ರಿಯ ಮೇಲೆ, ದೇಶವಿಭಜಕ ಶಕ್ತಿಗಳ ಬಗ್ಗೆ, ದ. ಆಫ್ರಿಕಾದ ವರ್ಣದ್ವೇಷದ ವಿರುದ್ಧ ಸರ್ವ ಸಾಮಾನ್ಯ ಅಭಿಪ್ರಾಯವನ್ನು ರೂಪಿಸುವುದಕ್ಕೆ ಸ್ವಯಂತಾವೇ ಕರೆದ ಸಭೆಯ ಪ್ರಯತ್ನವನ್ನು ಸ್ವಾಗತಿಸಿದರು.

ಇದು ಕಾರ್ಮಿಕ ವರ್ಗದಲ್ಲಿ ಕಾರ್ಮಿಕ ಚಳುವಳಿಯಲ್ಲಿ ವಿಶಾಲವಾದ ಅತಿಮುಖ್ಯವಾದ ಸಮಸ್ಯೆಗಳ ಬಗ್ಗೆ ಬೆಳೆಯುತ್ತಿರುವ ಅರಿವಿನ ಲಕ್ಷಣ ಎಂದರು. ಈ ಸಭೆಗೆ ಬಂದ ಎಲ್ಲಾ ಕಾರ್ಮಿಕ ಸಂಘಗಳು- ಇಂಟಕ್, ಸಿ.ಐ.ಟಿ.ಯು. ಐಟಕ್, ಎಚ್.ಎಂ.ಎಸ್., ಬಿ.ಎಂ.ಎಸ್. ಯು.ಟಿ.ಯು.ಸಿ, ಟಿ.ಯು.ಸಿ.ಸಿ., ಯು.ಟಿ.ಯು.ಸಿ. (ಲೆನಿನ್ ಸರಣಿ) ಒಂದು ಸರ್ವಸಾಮಾನ್ಯವಾದ ನಿಲುವನ್ನು ತಳೆದುದು ತೃಪ್ತಿಕರ, ಇದು ಇಡೀ ಕಾರ್ಮಿಕ ವರ್ಗ ಅಂತರರಾಷ್ಟ್ರೀಯ ಜವಾಬುದಾರಿಯನ್ನು ನಿರ್ವಹಿಸಲನುವಾಗುವಂತೆ ನಾವು ಜಂಟಿಪ್ರಯತ್ನಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂದರು.

ದೇಶ ವಿಭಜಕ ಶಕ್ತಿಗಳ ವಿರುದ್ಧ ಕಾರ್ಮಿಕ ವರ್ಗದ ಐಕ್ಯತೆಯನ್ನು ಭಂಜಿಸುವ ಶಕ್ತಿಗಳ ವಿರುದ್ಧ, ನಮ್ಮ

[8ನೇ ಪುಟ ನೋಡಿ]

ಕರ್ನಾಟಕ ಪ್ರಾಂತ ರೈತ ಸಂಘದ ಎಂಟನೇ ರಾಜ್ಯ ಸಮ್ಮೇಳನ

ಅಖಿಲ ಭಾರತ ಕಿಸಾನ್ ಸಭಾದ ಸ್ವರ್ಣಮಹೋತ್ಸವ ಸಮ್ಮೇಳನದ ಪೂರ್ವ ಭಾವಿಯಾಗಿ ದಿನಾಂಕ 11, 12, 13 ರಂದು ರಾಯಚೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ಸೇರುತ್ತಿದೆ

ಈ ಸಮ್ಮೇಳನ ರಾಜೀವ್ ಗಾಂಧಿಯವರ ಏಕಸ್ವಾಮ್ಯ ಬಂಡವಾಳಶಾಹಿಪರ, ಭೂಮಾಲೀಕ ಪರವಾದ "ನವ ಆರ್ಥಿಕ ನೀತಿ" ರಸಗೊಬ್ಬರದ, ಅಕ್ಕಿಯ, ಗೋಧಿಯ, ಸೀಮೆಎಣ್ಣೆಯ ರೈತ, ಕೃಷಿ ಕಾರ್ಮಿಕರ ದಿನ ನಿತ್ಯದ ಅಗತ್ಯಗಳ ಬೆಲೆಯನ್ನು ಏರಿಸಿ ಗ್ರಾಮೀಣ ಬಡ ಜನರ ಬದುಕನ್ನು [illegible] ಮಾಡಿರುವ ಹಿನ್ನೆಲೆಯಲ್ಲಿ, ರಸಗೊಬ್ಬರ, ಆಹಾರ ಧಾನ್ಯಗಳಿಗೆ ಕೇಂದ್ರ ಸರಕಾರ ನೀಡುತ್ತಾ ಬಂದಿರುವ ಎರಡು ಸಾವಿರ ಕೋಟಿ ರೂ ಸಹಾಯ ಧನವನ್ನು ಕಡಿತ ಮಾಡಿ ಉಳಿಸಿದ ಹಣವನ್ನು ಏಕಸ್ವಾಮ್ಯ ಬಂಡವಾಳಗಾರರು ಕಂಪ್ಯೂಟರ್‌ಗಳನ್ನು ಆಮದು ಮಾಡಲು ದಾನ ಮಾಡುವುದರ ಹಿನ್ನೆಲೆಯಲ್ಲಿ, ಈ ಕಂಪ್ಯೂಟರೀಕರಣದ ನೀತಿಯಿಂದಾಗಿ, ಅಷ್ಟಿಷ್ಟು ಕಲಿತು ಉದ್ಯೋಗಕ್ಕಾಗಿ ಅಲೆದಾಡುತ್ತಿರುವ ರೈತರ ಕೃಷಿ ಕಾರ್ಮಿಕರ ಲಕ್ಷಾಂತರ ಮಕ್ಕಳು ಮತ್ತು ಹಳ್ಳಿ ಸೇರಿ ಇಲ್ಲದ ಅನ್ನದಲ್ಲಿಯೇ ಪಾಲಿಗಾಗಿ ಬಡಿದಾಡಬೇಕಾಗಿ ಬಂದಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸೇರುತ್ತಿದೆ

ಹೊಸ ಜವಳಿ ನೀತಿ, ಸಕ್ಕರೆ ನೀತಿಯಿಂದ, ತೆಂಗು ಆಮದು ನೀತಿಯಿಂದ ಲಕ್ಷಾಂತರ ರೈತರಿಗೆ ಲಾಭದಾಯಕ ಬೆಲೆ ಸಿಗದೆ ಕಂಗಾಲಾಗಿರುವುದರ ಹಿನ್ನೆಲೆಯಲ್ಲಿ ಸೇರುತ್ತಿದೆ ಸಮ್ಮೇಳನ.

ಪಕ್ಷದ ಕಾರ್ಯಕ್ರಮದಿಂದ

ಪ್ರಜಾಸತ್ತಾತ್ಮಕ ಕ್ರಾಂತಿಯ ಎಲ್ಲ ಅಂಶಗಳೂ ತನ್ನ ಸುತ್ತ ಸುತ್ತಲೇಬೇಕಾದ ಕೇಂದ್ರ ಕೃಷಿ ಕ್ರಾಂತಿ. ಇದರ ಸಂಪೂರ್ಣ ಪ್ರಾಮುಖ್ಯತೆ ಮನವರಿಕೆ ಮಾಡಿಕೊಳ್ಳಲು ವಿಫಲವಾಗುವುದೆಂದರೆ ಪ್ರಜಾಪ್ರಭುತ್ವ ಕ್ರಾಂತಿಯು ಸಾರವನ್ನೇ ಕಳೆದುಕೊಂಡಂತೆ. ಪಾಳೆಯಗಾರಿ, ಸಾಮ್ರಾಜ್ಯಶಾಹಿ ವಿರೋಧಿಯಾದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯು ಕೈಗೊಳ್ಳಬೇಕಾದ ಮೊದಲ ಕೆಲಸವೆಂದರೆ ಭೂಸುಧಾರಣೆಯೂ ಸೇರಿದಂತೆ ಇಡೀ ಕೃಷಿ ಸಂಬಂಧಗಳ ಸುಧಾರಣೆ.

ಸ್ಥಗಿತಗೊಂಡ ಕೃಷಿ ಅಭಿವೃದ್ಧಿ-ಬರಗಾಲ

ಕರ್ನಾಟಕದ ಇಡೀ ಆರ್ಥಿಕ ಅಭಿವೃದ್ಧಿ

(8ನೇ ಪುಟ ನೋಡಿ)

ಕಿಸಾನ್ ಸಭಾದ ಏಳು ದೋಷಗಳು

ಪಕ್ಷದ ವಿಜಯವಾಡ ಸಮ್ಮೇಳನದ ರಾಜಕೀಯ ಸಂಘಟನಾ ವರದಿ ಗುರುತಿಸಿದ ಏಳು ದೋಷಗಳು-

ಮೊದಲನೆಯದಾಗಿ,

ಸಾಮಾಜಿಕ ತುಳಿತದ ವಿರುದ್ಧ, ಒಕ್ಕಲೆಬ್ಬಿಸುವುದರ ವಿರುದ್ಧ, ಅನ್ಯಾಯದ ವಿರುದ್ಧ ಸಾಮಾನ್ಯ ಜನತೆ ತಾನೇ ತಾನಾಗಿ ಆರಂಭಿಸುವ ಹೋರಾಟಗಳಿಗೆ ಸಾಕಷ್ಟು ಗಮನ ನೀಡದಿರುವುದು

(8ನೇ ಪುಟ ನೋಡಿ)

ಮನೆ ನಿವೇಶನಕ್ಕಾಗಿ ರೈತ ಸಮ್ಮೇಳನದ ಒತ್ತಾಯ

ದಿನಾಂಕ 23-3-86 ರಂದು ಉಡುಪಿ ತಾಲೂಕಿನ ರೈತರ ಸಮ್ಮೇಳನವು ಉಡುಪಿಯಲ್ಲಿ ಕಾಮ್ರೇಡ್ ರಾಮ ಕೆ. ಕುಂದರರ ಅಧ್ಯಕ್ಷತೆಯಲ್ಲಿ ಸೇರಿ ದರ್ಖಾಸ್ತು ಭೂಮಿಯನ್ನು ಖಾಯಂಗೊಳಿಸಿ ಮನೆ ಕಟ್ಟಿ ಕೂತವರಿಗೆ ಹಕ್ಕುಪತ್ರ ನೀಡುವಂತೆ ಕರ್ನಾಟಕ ಸರಕಾರವನ್ನು ಒತ್ತಾಯಿಸಲಾಯಿತು. ಉಡುಪಿ ತಾಲೂಕಿನ ಹಳ್ಳಿಗಳಿಂದ ಸುಮಾರು 49 ಮಂದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಕಾ| ಡೇವಿಡ್ ಕರ್ಕಡರು ಕಳೆದ ಸಮ್ಮೇಳನದ ನಂತರ ನಡೆಸಿದ ಹೋರಾಟದ ಮತ್ತು ಚಟುವಟಿಕೆಯ ವರದಿ ನೀಡಿದರು.

ರೈತ ಕೂಲಿಗಾರರು ಹಾಗೂ ಗ್ರಾಮೀಣ ಬಡವರನ್ನು ಸಂಘಟಿಸಿ ಐಕ್ಯ ಕಾರ್ಯಾಚರಣೆ ಮೂಲಕ ಬಡರೈತರ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಸಾಧ್ಯವಾಗುವಂತೆ ಸದಸ್ಯತನವನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು.

ಇದೇ ಮಾರ್ಚ್ 30-31 ರಂದು ಮಂಗಳೂರಿನಲ್ಲಿ ಜರಗುವ ಜಿಲ್ಲೆಯ ಜಿಲ್ಲೆಯ ರೈತರ 8ನೇ ಸಮ್ಮೇಳನಕ್ಕೆ 10 ಮಂದಿ ಪ್ರತಿನಿಧಿಗಳನ್ನು ಆರಿಸಿ ಸಮ್ಮೇಳನದ ಯಶಸ್ವಿಗಾಗಿ ಪ್ರಚಾರ ನಡೆಸಲು ನಿರ್ಧರಿಸಲಾಯಿತು.

ರೈತ ಸಂಘದ ತಾಲ್ಲೂಕು ಸಮಿತಿಗೆ ಶ್ರೀಗಳಾದ ರಾಮ ಕೆ. ಕುಂದರ್ (ಅಧ್ಯಕ್ಷರು) ಶ್ಯಾಮಶೆಟ್ಟಿ (ಉಪಾಧ್ಯಕ್ಷರು) ಡೇವಿಡ್ ಕರ್ಕಡ [ಕಾರ್ಯದರ್ಶಿ] ಕೃಷ್ಣ ಎಸ್. ಅಮೀನ್ [ಜತೆ ಕಾರ್ಯದರ್ಶಿ] ಕಾಡಿಯ ಪೂಜಾರಿ (ಕೋಶಾಧಿಕಾರಿ)ಯಾಗಿರುವ 13 ಜನ ಸದಸ್ಯರನ್ನು ಆರಿಸಲಾಯಿತು.

ಉಡುಪಿ ನಗರದ ಪ್ರಸಿದ್ಧ ನ್ಯಾಯವಾದಿ ಶ್ರೀ ಕೆರ್ಕಾಡಿ ವಿಲಿಯಂ ಪಿಂಟೊರವರು ಆಗಮಿಸಿ ಶುಭ ಸಂದೇಶ ನೀಡುತ್ತಾ "ಸ್ವಾತಂತ್ರ್ಯ ಬಂದು 38 ವರ್ಷಗಳ ನಂತರವೂ ಹಳ್ಳಿಯ ಬಡವರ ಬದುಕು ನಿರಾಶಾದಾಯಕವಾಗಿದೆ. ಸರಿಯಾದ ಸಂಪಾದನೆ ಮತ್ತು ತತ್ವಬದ್ಧವಾದ ನಿಲುವನ್ನು ಹೊಂದಿರುವ ಸಂಘಟಿತರಾಗಿರುವ ನೀವು ನಿಮ್ಮ ಸಂಘಟನೆಯನ್ನು ಇನ್ನಷ್ಟು ಬಲಪಡಿಸಿ ಅನ್ಯಾಯ ಅಕ್ರಮಗಳ ವಿರುದ್ಧ ಹೋರಾಟ ನಡೆಸಲು ಮುಂದಾಗಬೇಕು ಮುಂದಕ್ಕೆ ನಡೆಯಲಿರುವ ಜಿಲ್ಲಾ ಪರಿಷತ್ತು, ಮಂಡಳ ಪಂಚಾಯತುಗಳ ಚುನಾವಣೆಗಳಲ್ಲಿ ಬಡ ಜನರ ಪ್ರತಿನಿಧಿಗಳು ಆರಿಸಿ ಬರುವಂತೆ ಪ್ರಯತ್ನ ನಡೆಸಬೇಕು ಸಂಘಟನೆ ಬಲಪಡಿಸಿದರೆ ಮಾತ್ರ ಜಾಗೃತಿ ಬೆಳೆಯುತ್ತದೆ. ಗ್ರಾಮೀಣ ಭಾಗದಲ್ಲಿ ಸಣ್ಣ ಬದಲಾವಣೆಯಾಗಬೇಕಾದರೂ ಹೋರಾಟ ಅನಿವಾರ್ಯವಾಗಿದೆ. ದೀರ್ಘಕಾಲದ ಹೋರಾಟದ ಪರಂಪರೆಯಿರುವ ನಿಮ್ಮ ಸಂಘಟನೆಗೆ ಸೇರುವ ನೀವು ಇನ್ನಷ್ಟು ಬೆಳೆದು ಯಶಸ್ಸು ಗಳಿಸುವಂತಾಗಲಿ" ಎಂದು ಶುಭ ಹಾರೈಸಿದರು.

ಕೊನೆಯಲ್ಲಿ ಡೇವಿಡ್ ಕರ್ಕಡ ಮಾತನಾಡಿ 19 6ರಲ್ಲಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕಿಸಾನ್‌ಸಭಾ ರೈತರನ್ನು ಜಾಗೃತಿಗೊಳಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಅಣಿನೆರೆಸಿದ್ದಲ್ಲದೆ ಭೂಮಿಗಾಗಿಯೂ ಕಾಯಿದೆಗಾಗಿಯೂ ನಡೆಸಿದ ಹೋರಾಟದ ನೆನಪು ಮಾಡುತ್ತಾ 50 ವರ್ಷಗಳ ದೀರ್ಘ ಪರಂಪರೆಯನ್ನು ಮುಂದುವರಿಸಬೇಕು, ಕಿಸಾನ್ ಸಭಾದ ಧ್ವಜಪಡಿಯಲ್ಲಿ ಸಂದೇಶವನ್ನು ಹಳ್ಳಿ ಹಳ್ಳಿಗಳಿಗೆ ಪ್ರತಿನಿಧಿಗಳು ಕೊಂಡೊಯ್ಯಬೇಕಾಗಿದೆ" ಎಂದು ತಿಳಿಸಿ ಧನ್ಯವಾದ ಸಲ್ಲಿಸಿದರು ●

ತುಮಕೂರು : ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆ

ಮಂಡಲ್ ಪಂಚಾಯಿತಿ ಕ್ಷೇತ್ರಗಳ ಹಾಗೂ ಕೇಂದ್ರಗಳ ವಿಂಗಡನೆ ಮತ್ತು ಜಿಲ್ಲಾ ಪರಿಷತ್ ಕ್ಷೇತ್ರಗಳ ವಿಂಗಡನೆಗಳು ಅಸಮರ್ಪಕವಾಗಿದ್ದು, ಈ ಬಗ್ಗೆ ಜಿಲ್ಲಾ ರೈತಸಂಘವು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೂ, ಶಾಸಕರುಗಳಿಗೂ ಮತ್ತು ಸರ್ಕಾರಕ್ಕೂ ಸಲ್ಲಿಸಿರುವ ಮೇಲ್ಮನವಿಗಳನ್ನು ಸಂಬಂಧಪಟ್ಟವರು ಪುರಸ್ಕರಿಸಿ ಕ್ಷೇತ್ರ ಹಾಗೂ ಕೇಂದ್ರಗಳ ಪುನರ್‌ರಚನೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವ,

ಬರ ಪರಿಹಾರ ಕಾಮಗಾರಿಗಳು, ಕುಡಿಯುವ ನೀರಿನ ಸೌಲಭ್ಯಗಳ ಬಗ್ಗೆ ತುಮಕೂರು ಕ್ಷೇತ್ರದ ಶಾಸಕರುಗಳು ಹೆಚ್ಚಿನ ಆಸಕ್ತಿ ವಹಿಸುವಂತೆ ಕೇಳಿಕೊಳ್ಳುವ,

4) ತುಮಕೂರು ತಾಲ್ಲೂಕು ಭೂ ಪಂಚಾಯಿತಿ ಮಂಡಳಿಯು ಅಮಾನತ್ತುಗೊಳಿಸಲ್ಪಟ್ಟಿರುವುದರಿಂದ ಆದಷ್ಟು ಬೇಗ ಈ ಮಂಡಳಿಯು ಪುನರ್‌ರಚಿತಗೊಂಡು ಈ ಮಂಡಳಿಯಲ್ಲಿ ಪ್ರಾಂತ ರೈತ ಸಂಘದ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದೂ,

5) ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು, ರೈತ, ಕೃಷಿ ಕೂಲಿಗಾರರಿಗೆ, ಸೊಸೈಟಿ ಮತ್ತು ಬ್ಯಾಂಕ್‌ಗಳ ಮುಖಾಂತರ ಕೊಡಲ್ಪಡುವ ಸಾಲ-ಸೌಲಭ್ಯಗಳು ಸಂಬಂಧಪಟ್ಟ ಅಧಿಕಾರಿಗಳ ಮಟ್ಟದಲ್ಲಿ ಅವಶ್ಯಕ ವಿಳಂಬಕ್ಕೆ ಎಡೆ ಮಾಡಿಕೊಟ್ಟಿದ್ದು ಭ್ರಷ್ಟಾಚಾರ ಬೆಳೆಯುತ್ತಿರುವುದು ಸಂಘದ ಗಮನಕ್ಕೆ ಬಂದಿದೆ. ಇದೇ ರೀತಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಜಮೀನು ಅಡಮಾನ ಸಹಕಾರ ಕೇಂದ್ರಬ್ಯಾಂಕ್‌ಗಳ ಆಡಳಿತ ವರ್ಗದಲ್ಲೂ ರೈತರ ಬಗ್ಗೆ ಕಾಳಜಿ ಸಾಕಷ್ಟು ಕಾಣಬರುತ್ತಿಲ್ಲವಾಗಿ, ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವಿಶೇಷ ಜಿಲ್ಲಾಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುವ ನಿರ್ಣಯಗಳನ್ನು ತುಮಕೂರು ಜಿಲ್ಲಾ ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೈಗೊಳ್ಳಲಾಯಿತು ●

ರೈತ ಕಾರ್ಮಿಕರ ಐಕ್ಯ ಹೋರಾಟಕ್ಕೆ ಕರೆ

ಬಂಟ್ವಾಳ, ಮಾರ್ಚ್ 20- ಬಂಟ್ವಾಳ ತಾಲ್ಲೂಕಿನ ಬೀಡಿ ಕೆಲಸಗಾರರ ಸಂಘದ ಕಾರ್ಯಕರ್ತರ ಸಭೆ 20ರಂದು ಪೂವಯ್ಯ ಬಂಗೇರರ ಅಧ್ಯಕ್ಷತೆಯಲ್ಲಿ ಜರುಗಿತು.

ಹದಗೆಟ್ಟಿರುವ ಭಾರತದ ಆರ್ಥಿಕ, ರಾಜಕೀಯ, ಸಾಮಾಜಿಕ ಪರಿಸ್ಥಿತಿಯಲ್ಲಿ ರೈತ ಕಾರ್ಮಿಕರ ಐಕ್ಯ ಹೋರಾಟದಿಂದ ಆಳುವ ವರ್ಗದ ಜನವಿರೋಧಿ ನೀತಿಯನ್ನು ಸೋಲಿಸಲು ಸಾಧ್ಯವೆಂದು ಸಿ.ಐ.ಟಿ ಯುವಿನ ಮುಖಂಡರಾದ ಕೆ. ಮೊಸಬ್ಬನವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಶ್ರೀ ಬಿ.ವಾಸುಗಟ್ಟಿ ಮಾತನಾಡಿ ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿಯೇ ಹೋರಾಟವನ್ನು ಸೀಮಿತಗೊಳಿಸದೆ ತಮ್ಮ ಸಂಘಟನೆಯನ್ನು ವಿಸ್ತರಿಸಿ ಬಲಗೊಳಿಸಿ ಇತರ ದುಡಿಯುವ ಜನರ ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದಿಸಿ, ಅವರೊಂದಿಗೆ ಪ್ರಚಲಿತ ಸಾಮಾಜಿಕ ಅನಿಷ್ಟ ನೀತಿಯ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು.

ಮಾರ್ಚ್ ತಿಂಗಳ 30-31ನೇ ದಿನಗಳಲ್ಲಿ ಮಂಗಳೂರಲ್ಲಿ ಜರುಗುವ ರೈತ ಸಂಘದ 8ನೇ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಭೆ ನಿರ್ಣಯಿಸಿತು. ಶ್ರೀ ಟಿ ನಾರಾಯಣ ಆರಂಭದಲ್ಲಿ ಸ್ವಾಗತಿಸಿದರು

ಪಂಜಿನ ಮೆರವಣಿಗೆ

ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ ರೇಣುಕಾಂಬ ಜಾತ್ರೆಯ ಸಂದರ್ಭದಲ್ಲಿ ನಡೆಯುವ "ಬೆತ್ತಲೆ ಸೇವೆ"ಯ ಅಮಾನವೀಯ ಮತ ಮೌಢ್ಯವನ್ನು ಪ್ರತಿಭಟಿಸಿ ಹಾಗು ಈ ಬಗ್ಗೆ ಸರಕಾರ ಸೂಕ್ತ ಕ್ರಮ ಕೈಗೊಳ್ಳಲಿ ಒತ್ತಾಯಿಸಿ ಮೈಸೂರಿನಲ್ಲಿ ಎಸ್. ಎಫ್. ಐ ಮತ್ತು ಡಿ ವೈ. ಎಫ್. ಐ ಸಂಘಟನೆಗಳು ಜಂಟಿಯಾಗಿ ಮೈಸೂರು ನಗರದಲ್ಲಿ ಪಂಜಿನ ಮೆರವಣಿಗೆ ನಡೆಸಿ – ಪುರಭವನದ ಆವರಣದಲ್ಲಿ ಪ್ರತಿಭಟನಾ ಸಭೆ ನಡೆಸಿದರು

ವಿದ್ಯಾರ್ಥಿನಿಯರೂ ಸೇರಿದಂತೆ ಮೈಸೂರಿನ ನಗರದಲ್ಲಿ ಪ್ರಮುಖ ಬೀದಿಗಳಲ್ಲಿ ನಡೆಸಿದ ಮೆರವಣಿಗೆಯು ಸಾರ್ವಜನಿಕರ ಗಮನ ಸೆಳೆದಿತ್ತು.

ಪುತ್ತೂರು ತಾಲೂಕು ರೈತ ಸಮ್ಮೇಳನ

ತಾ.15-3-86ರಂದು ಪುತ್ತೂರು ತಾಲೂಕು ರೈತ ಸಂಘದ ಎರಡನೇ ಸಮ್ಮೇಳನವು ರೈತ ಸಂಘದ ಜಿಲ್ಲಾಧ್ಯಕ್ಷ ಕಾ|| ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ರೈತ ಸಂಘದ ಉಪಕಾರ್ಯದರ್ಶಿ ಕಾ|| ಅಣ್ಣುನವರು ಸ್ವಾಗತಿಸಿದರು.

ಸಮ್ಮೇಳನದ ಉದ್ಘಾಟನೆಯನ್ನು ಶ್ರೀಯಾನ್ ಮಾಡಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಬಡ ದರ್ಖಾಸ್ತುದಾರರನ್ನು ಸಂಘಟಿಸಿ ಅವರ ವಿಭಾಗೀಯ ಸಮ್ಮೇಳನ ನಡೆಸಿ ಅವರದು ಬೃಹತ್ ತರಹದ ಸಮಸ್ಯೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದ ಕೀರ್ತಿ ಪುತ್ತೂರು ತಾಲೂಕು ರೈತ ಸಂಘಕ್ಕೆ ಸೇರಿದ್ದಾಗುತ್ತದೆ. ಈ ಹೋರಾಟವನ್ನು ಮುಂದುವರಿಸುತ್ತಾ ರೈತ ಸಂಘವನ್ನು ಬಲಪಡಿಸಬೇಕೆಂದು ಕರೆಯಿತ್ತರು.

ಬಳಿಕ 1982ರಿಂದ 1986ರವರೆಗಿನ ಅವಧಿಯ ರೈತ ಸಂಘದ ವರದಿಯನ್ನು ಬಿ. ರಾಮಕೃಷ್ಣನವರು ಸಮ್ಮೇಳನದ ಮುಂದಿಡುತ್ತಾ ಎಕೆಜಿಯವರಿಂದ ಉದ್ಘಾಟಿಸಲ್ಪಟ್ಟ ರೈತ ಸಂಘವು 14 ವರ್ಷಗಳತ್ತ ಹೆಜ್ಜೆಯಿಡುವ ಈ ಸಂದರ್ಭದಲ್ಲಿ ಈ ತಾಲೂಕಿನ ಅಸಂಖ್ಯಾತ ರೈತ ಕಾರ್ಮಿಕರ ನೈಜ ಸಮಸ್ಯೆಗಳನ್ನು ಹಿಡಿದೆತ್ತಿ ಹೋರಾಟ ನಡೆಸಿದೆ. ಅವುಗಳಲ್ಲಿ ಮುಖ್ಯವಾಗಿ, ಹಲವಾರು ವರ್ಷಗಳಿಂದಲೂ ಸರ್ಕಾರಿ ಭೂಮಿಯನ್ನು ಅಕ್ರಮಿಸಿ ಅಗ್ನಿ ಮಾಡಿರುವ ಬಡ ದರ್ಖಾಸ್ತುದಾರರನ್ನು ಸಂಘಟಿಸಿ, ಅವರಿಗೆ ದರ್ಖಾಸ್ತು ಹಕ್ಕು ಕೊಡಿಸಿದೆಂದು ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾ. ಅಬ್ರಹಾಂ ಕರ್ಕಡರವರು ರೈತರಿಗೆ ಭೂಮಿಯನ್ನು ಭೂನ್ಯಾಯ ಮಂಡಳಿಯ ಮೂಲಕ ಹಂಚಿದರೂ ಅವರಿಗೆ ಭೂಮಿಯ ಖಾಯಂ ಒಡೆತನ ಇನ್ನೂ ಲಭಿಸಿಲ್ಲ. ರೈತರು ಬೆಳೆಸಿದ ಬೆಳೆಗೆ ನ್ಯಾಯ ಬೆಲೆ ಸಿಗುತ್ತಿಲ್ಲ. ಭೂಮಿಯಲ್ಲಿ ದುಡಿಯುವ ರೈತನಿಗೆ ಭೂಮಿಯ ಸಂಪೂರ್ಣ ಒಡೆತನ ಸಿಗಬೇಕು. ಎಂದರು.

ಸಮ್ಮೇಳನದ ತಾಲೂಕು ಸಮಿತಿಗೆ ಈ ಕೆಳಗಿನವರನ್ನು ಪದಾಧಿಕಾರಿಗಳನ್ನಾಗಿ ಆರಿಸಿತು.

ಅಧ್ಯಕ್ಷ – ಕಾ. ಪಿ.ಕೆ. ಸತೀಶನ್, (ನ್ಯಾಯವಾದಿ) ಉಪಾಧ್ಯಕ್ಷ –ಕಾ.ಬಿ. ರಾಮಕೃಷ್ಣ, ಕಾರ್ಯದರ್ಶಿ ಕಾ. ಅಣ್ಣು, ಸಹಕಾರ್ಯದರ್ಶಿ ಕಾ. ಪದ್ಮನಾಭ ನಾಯರ್, ಹಾಗೂ 11ಜನರಿರುವ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿ ಕಾ. ಅಣ್ಣುನವರು ಧನ್ಯವಾದಗಳನ್ನಿತ್ತರು.

ಕರ್ನಾಟಕ ಪ್ರಾಂತ ರೈತ ಸಂಘದ ಎಂಟನೇ ರಾಜ್ಯ ಸಮ್ಮೇಳನ

ಪ್ರತಿನಿಧಿಗಳ ಗಮನಕ್ಕೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಇದೇ ಏಪ್ರಿಲ್ 11, 12, 13 ರಂದು ತನ್ನ ಎಂಟನೇ ರಾಜ್ಯ ಸಮ್ಮೇಳನವನ್ನು ರಾಯಚೂರು ನಗರದ ಕಲ್ಯಾಣ ಮಂಟಪದಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ಎಲ್ಲಾ ಪ್ರತಿನಿಧಿ, ಸಂಗಾತಿಗಳಿಗೆ ರಾಯಚೂರು ನಗರಕ್ಕೆ ಸ್ವಾಗತಿಸುತ್ತೇವೆ.

ಪ್ರತಿನಿಧಿ, ಹಾಗೂ ವೀಕ್ಷಕರು ಸೇರಿದಂತೆ ರಾಜ್ಯ ಸಮಿತಿ ಸದಸ್ಯರನ್ನು ಹೊರತು ಪಡಿಸಿ ರೂ-20 ಶುಲ್ಕವನ್ನ ಕಡ್ಡಾಯವಾಗಿ ಕೊಡಲೇಬೇಕು.

11-4-86ರಂದು ಮುಂಜಾನೆ ಹನ್ನೊಂದು ಘಂಟೆಗೆ ಧ್ವಜಾರೋಹಣ, 11-30ಕ್ಕೆ ಉದ್ಘಾಟನೆ. ಎಲ್ಲಾ ಪ್ರತಿನಿಧಿಗಳು ಮುಂಜಾನೆ ಒಂಭತ್ತರೊಳಗೆ ಬಂದು ಸ್ವಾಗತ ಸಮಿತಿಯನ್ನು ಸಂಪರ್ಕಿಸಬೇಕು. 10.4.86 ರ ಸಾಯಂಕಾಲ ಬಂದರೂ ನಗರದ ಗಂಜ ಕಲ್ಯಾಣ ಮಂಟಪಕ್ಕೆ ಬರಬೇಕು ಮುಂಜಾನೆ 5-00 ಘಂಟೆಯಿಂದ ಬಸ್ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣದಲ್ಲಿ ಕೆಂಪು ಝಂಡಾಗಳನ್ನು ಹೊತ್ತ ಸೈಕಲ್ ರಿಕ್ಷಾಗಳು ಕಾದಿರುತ್ತವೆ. ಹಣ ಪಾವತಿ ಮಾಡದೆ ಸಮ್ಮೇಳನಕ್ಕೆ ಸ್ಥಳಕ್ಕೆ ಬರಬೇಕು. ರಿಕ್ಷಾಗಳು ಇಲ್ಲದಿದ್ದರೆ ಕೆಲ ಸಮಯ ಕಾಯ್ದರೆ ರಿಕ್ಷಾಗಳು ಬರುತ್ತವೆ.

ಸಮ್ಮೇಳನಕ್ಕೆ ಬರುವಾಗ, ಆಯಾ ಜಿಲ್ಲೆಯ ಬ್ಯಾನರ್ ಝಂಡಾಗಳನ್ನು ತರಬೇಕು. 13.4.86ರಂದು ಬೃಹತ್ ರ್‍ಯಾಲಿಯಿರುತ್ತದೆ. ಸಾಧ್ಯವಾದ ಮಟ್ಟಿಗೆ ಪ್ರಯತ್ನ ಮಾಡಿ ಸಮವಸ್ತ್ರಧಾರಿಗಳನ್ನು ಸೇರಿದಂತೆ ರ್‍ಯಾಲಿಗೆ ಜನರನ್ನು ಬರುವಂತೆ ವ್ಯವಸ್ಥೆಗೊಳಿಸಬೇಕು. ವಿಶೇಶವಾಗಿ ಗುಲ್ಬರ್ಗ, ಬಳ್ಳಾರಿ, ಬಿಜಾಪುರ ಜಿಲ್ಲೆಗಳು ರಾಯಚೂರಿಗೆ ಹತ್ತಿರವಾಗಿದ್ದು ಸಾವಿರ ಸಂಖ್ಯೆಯಲ್ಲಿ ಜನರನ್ನು ಬರುವಂತೆ ವ್ಯವಸ್ಥೆ ಮಾಡಬೇಕು.

— ಸ್ವಾಗತ ಸಮಿತಿ

ಪಂಜಾಬನ್ನು ರಕ್ಷಿಸಿ - ದೇಶ ಉಳಿಸಿ

ದಿನ ನಿತ್ಯ ವೆಂಬಂತೆ ನಡೆಯುತ್ತಿರುವ ನಿರಪರಾಧಿ ಜನರ ಕೊಲೆ, ಹಿಂಸಾಚಾರ ಮತ್ತು ಗಲಭೆಗಳಿಂದಾಗಿ ಪಂಜಾಬ್ ಸಮಸ್ಯೆ ಉಲ್ಬಣವಸ್ಥೆಗೇರಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಲ್ಲೂ ಸ್ವಾತಂತ್ರ್ಯ ಚಳುವಳಿ ಇರಿಸಿಕೊಂಡಿದ್ದ ಆಶಯಗಳಲ್ಲೂ ನಂಬಿಕೆ ಇರುವ ಜನರಿಗೆ ಅತ್ಯಂತ ಕಳವಳವುಂಟು ಮಾಡುವ ವಿಚಾರ. ಪಂಜಾಬ್ ಸಮಸ್ಯೆ ವಿಷಮಿಸಿ ಅದು ದೇಶಾದ್ಯಂತ ವ್ಯಾಪಿಸಿ, ಆ ಬಳಿಕ ದೇಶದ ಇತರ ಕಡೆ ಸಿಖ್ ಅಲ್ಪ ಸಂಖ್ಯಾತರು ಭಯಪಟ್ಟು ಪಂಜಾಬಿಗೆ ವಲಸೆ ಬರುವಂತೆ ಮಾಡುವುದೇ ಸಾಮ್ರಾಜ್ಯಶಾಹಿಗಳ ಹಸ್ತಕರಾಗಿರುವ ಉಗ್ರಗಾಮಿಗಳ ಉದ್ದೇಶವಾಗಿರುವಂತಿದೆ. ಹೀಗಾದದಲ್ಲಿ ತಮ್ಮ "ಖಾಲಿಸ್ತಾನ" ರಚನೆಯ ಪಿತೂರಿ ಯಶಸ್ವಿಯಾದೀತೆಂದು ಅವರು ತಿಳಿದಿದ್ದಾರೆ. ಪಂಜಾಬ್ ರಾಜ್ಯದೊಳಗೆ ಅಲ್ಪ ಸಂಖ್ಯಾತರು ಎದುರಿಸುತ್ತಿರುವ ಅಭದ್ರತೆಯ ಸನ್ನಿವೇಶವನ್ನು ಹಿಂದೂ ಕೋಮುವಾದಿಗಳು ಚೆನ್ನಾಗಿ ದುರುಪಯೋಗ ಮಾಡುತ್ತಿದ್ದಾರೆ ಹಿಂದೂಗಳನ್ನು ಹಿಂಸಾತ್ಮಕ ಪ್ರತಿಭಟನೆಗೆ ಪ್ರಚೋದಿಸುತ್ತಿರುವ ಇಂತಹ ಕೋಮುವಾದಿಗಳು ಸಿಖ್ ಉಗ್ರಗಾಮಿಗಳ ಉದ್ದೇಶಕ್ಕೆ ಪರೋಕ್ಷವಾಗಿ ನೆರವಾಗುತ್ತಿದ್ದಾರೆನ್ನುವುದನ್ನು ಗಮನಿಸಬೇಕು.

"ಉಗ್ರಗಾಮಿಗಳೆಂದರೆ ಬುದ್ಧಿಯಿಲ್ಲದ, ದಾರಿ ತಪ್ಪಿದ ಮಂದಿ, ಅವರನ್ನು ಸರಿದಾರಿಗೆ ತರುವುದು ಸಾಧ್ಯವೆಂದು ಅಕಾಲಿಪಕ್ಷದ ಅನೇಕ ಮುಂದಾಳುಗಳು ಭಾವಿಸಿರುವಂತಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಳ್ಳುವ ಅವಕಾಶವಿಲ್ಲದ ಮತ್ತು ಅಕಾಲಿ ಚಳುವಳಿಯ ಚರಿತ್ರೆಯ ಸರಿಯಾದ ಪರಿಚಯವಿಲ್ಲದ ಅನೇಕ ಸಿಖ್ ಬುದ್ಧಿ ಜೀವಿಗಳು ಇದನ್ನು ನಂಬಿದ್ದಾರೆ. ಅಕಾಲಿಗಳು ಆನಂದಪುರ ಸಾಹಿಬ್ ನಿರ್ಣಯವನ್ನು ಈಗಲೂ ಬೆಂಬಲಿಸುತ್ತಿರುವುದರಿಂದ ಮತ್ತು ಅಕಾಲಿಗಳ ಪಾಲಿಗೆ ಧರ್ಮ ಮತ್ತು ರಾಜಕೀಯಗಳು ಬೇರೆ ಬೇರೆ ಅಲ್ಲವೆನ್ನುವ ಅವರ ಸಿದ್ಧಾಂತವೇ ಸಿಖ್ ಮೂಲಭೂತವಾದಿಗಳ ಹುಟ್ಟಿಗೆ ಕಾರಣ. ಭಿಂದ್ರನ್ ವಾಲೆಯನ್ನು ಅಕಾಲಿ ಪಕ್ಷದ ಮುಂದಾಳುತ್ವಕ್ಕೆ ಬದಲಿಯಾಗಿ ಬೆಳೆಸಿದವರು ಕಾಂಗ್ರೆಸ್ಸಿಗರು ಶಿರೋಮಣಿಗುರುದ್ವಾರಪ್ರಬಂಧಕಸಮಿತಿ ಚುನಾವಣೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಆತ ಕಾಂಗ್ರೆಸ್ಸನ್ನು ಬೆಂಬಲಿಸಿದ್ದ. ಈ ಭಿಂದ್ರನ್‌ವಾಲೆಯನ್ನು ಜಗಜಿತ್ ಸಿಂಗ್ ತಲ್ವಂಡಿ ಅವರು ಅಖಿಲ ಭಾರತ ಅಕಾಲಿ ಸಮ್ಮೇಳನದಲ್ಲಿ ಪಕ್ಷದ ಎಲ್ಲ ವೇದಿಕೆಗಳಿಂದಲೂ ಉಚ್ಚಾಟಿಸಿದಾಗ ಅದರ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ ಅಂತಹ ಭಿಂದ್ರನ್‌ವಾಲೆ ಒಮ್ಮೆಲೇ ಸಿಖ್ಖರ ಪಾಲಿಗೆ ಮಹಾನ್ ನಾಯಕನಾಗಿ ಬಿಟ್ಟದ್ದು ಹೇಗೆ? ಅಕಾಲಿ ಪಕ್ಷವು ಸಿಖ್ಖರ ನಡುವೆ ಉದ್ದೇಶಪೂರ್ವಕವಾಗಿ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಿದ್ದು ಮತ್ತು ಸರ್ಕಾರದ ಮೇಲೆ ಒತ್ತಡ ಹೇರುವ ಸಲುವಾಗಿ ಭಯೋತ್ಪಾದನೆಯನ್ನೂ ಒಂದು ಅಸ್ತ್ರವಾಗಿ ಬಳಸಿಕೊಂಡದ್ದು ಭಿಂದ್ರನ್‌ವಾಲೆ ಪೆಡಂಭೂತವಾಗಿ ಬೆಳೆಯುವುದಕ್ಕೆ ಮೂಲ ಕಾರಣ. ಅಕಾಲಿ ಪಕ್ಷ ತನ್ನ ಪ್ರಜಾಸತ್ತಾತ್ಮಕ ಬೇಡಿಕೆಗಳಿಗೆ ಎಡಪಕ್ಷಗಳ ಮತ್ತು ಜಾತ್ಯತೀತ ಪಕ್ಷಗಳ ಪೂರ್ಣ ಬೆಂಬಲವಿದ್ದುದನ್ನೂ ಅಂತಹ ಬೆಂಬಲದಿಂದಾಗಿಯೇ ಸರಕಾರ ಅಕಾಲಿಗಳ ಜೊತೆಗೆ ಮಾತುಕತೆ ನಡೆಸಲು ಒಪ್ಪಿದುದನ್ನೂ ಸಂಪೂರ್ಣವಾಗಿ ಮರೆತು ಉಗ್ರಗಾಮಿಗಳ ಮೇಲೆ ಅವಲಂಬಿಸಿಕೊಳ್ಳಲಾರಂಭಿಸಿತು. ಇದರಿಂದಾಗಿ ದೇಶದ ಬೇರೆ ಕಡೆಗೆ ಸಿಖ್ಖರ ವಿರುದ್ಧ ದ್ವೇಷ ಹಬ್ಬಿಸಲು ಹಿಂದೂ ಕೋಮುವಾದಿಗಳಿಗೆ ತುಂಬಾ ಅನುಕೂಲವಾಯಿತು.

ಪಂಜಾಬ್ ಒಪ್ಪಂದಕ್ಕೆ ಅಮೋಘ ಜನಬೆಂಬಲ ದೊರೆತುದು ಅಕಾಲಿಪಕ್ಷ ಚುನಾವಣೆಗಳಲ್ಲಿ ಗಳಿಸಿದ ಅಭೂತಪೂರ್ವ ಯಶಸ್ಸಿನಿಂದ ರುಜುವಾತಾದರೂ ಅಕಾಲಿ ಸರಕಾರ ಉಗ್ರಗಾಮಿಗಳ ವಿರುದ್ಧ ಜನತೆಯನ್ನು ಅಣಿನೆರೆಯಿಸುವಲ್ಲಿ ಸೋತಿತು. ಸಂತ ಹರಚಂದ್ ಲೋಂಗೋವಾಲ್ ಅವರ ಬಲಿದಾನದ ಬಳಿಕವೂ ಅಕಾಲಿ ಪಕ್ಷಕ್ಕೆ ಉಗ್ರಗಾಮಿಗಳ ವಿರುದ್ಧ ಜನಾಭಿಪ್ರಾಯವನ್ನು ಸಂಘಟಿಸುವುದು ಸಾಧ್ಯವಾಗಲಿಲ್ಲ. ಪಂಜಾಬ್ ಒಪ್ಪಂದವೊಂದು ದ್ರೋಹವೆಂದು ಉಗ್ರಗಾಮಿಗಳು ಅಪಪ್ರಚಾರ ನಡೆಸಿ ಒಪ್ಪಂದಕ್ಕೆ ಕಾರಣರಾದವರನ್ನೂ ಅದನ್ನು ಬೆಂಬಲಿಸುವವರನ್ನೂ ಹತ್ಯೆಮಾಡುವ ಬೆದರಿಕೆಯೊಡ್ಡುತ್ತಿದ್ದಾಗಲೂ ಅಕಾಲಿ ಪಕ್ಷದ ಅನೇಕ ಮುಂದಾಳುಗಳು ಉಗ್ರಗಾಮಿಗಳ ಜೊತೆಗೆ ಸ್ನೇಹ ಬೆಳೆಸಿದ್ದರು. ತಮಗೆ ದೊರೆತಿದ್ದ ಅಪಾರ ಜನಬೆಂಬಲದ ನೆರವಿನಿಂದ ಉಗ್ರಗಾಮಿಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡದೆ ಈ ಭಯೋತ್ಪಾದಕರ ಜೊತೆ ರಾಜಿ ಮಾಡುವ ಪ್ರಯತ್ನ ನಡೆಸಿದ್ದರು. ಇವೆಲ್ಲವುಗಳಿಂದಾಗಿ ಅಕಾಲಿ ಪಕ್ಷ ಪರಿಸ್ಥಿತಿಯ ಮೇಲೆ ತನ್ನ ನಿಯಂತ್ರಣ ಕಳಕೊಂಡಿತಲ್ಲದೆ ಉಗ್ರಗಾಮಿಗಳ ಕೈಮೇಲಾಗುವುದಕ್ಕೆ ಅವಕಾಶ ಲಭಿಸಿತು. ಪಂಜಾಬಿನ ಜನತೆ ಹರಚಂದ ಲೋಂಗೋವಾಲರ ಸಂದೇಶವನ್ನು ಜ್ಯಾರಿಗೆ ತರ ಬಯಸಿದರು. ಅಕಾಲಿ ಸರಕಾರ ಅವರನ್ನು ನಿರಾಸೆಗೊಳಿಸಿತು. ಜನತೆಗೆ, ಬೇಕಾಗಿದ್ದದ್ದು ಪಂಜಾಬಿ ಜನರ ಐಕ್ಯತೆ, ಕೋಮುವಾರು ಸೌಹಾರ್ದ; ಗಾಯ ಮಾಗುವುದು ಅವರ ಆಶಯವಾಗಿತ್ತು. ಆದರೆ ರಾಜ್ಯ ಸರಕಾರ ಅವರ ನಿರೀಕ್ಷೆಯನ್ನು ಹುಸಿಗೊಳಿಸಿತು

ಸುವರ್ಣ ದೇವಾಲಯ ಮತ್ತಿತರ ಪ್ರಾಚೀನ ಗುರುದ್ವಾರಗಳ ಮೇಲೆ ಉಗ್ರಗಾಮಿಗಳು ತಮ್ಮ ನಿಯಂತ್ರಣವಿರಿಸಿಕೊಳ್ಳಲು ಪ್ರಯತ್ನಿಸಿ ಶಸ್ತ್ರಾಸ್ತ್ರಗಳನ್ನು ಗುಟ್ಟಿನಿಂದ ಒಳ ಸಾಗಿಸುವ ಪ್ರಯತ್ನ ನಡೆಸಿದಾಗ ಮುಖ್ಯಮಂತ್ರಿ ಬರ್ನಾಲಾ ಅಕಾಲ್ ತಖ್ತ್‌ನಿಂದ ಉಗ್ರಗಾಮಿಗಳನ್ನು ಹೊರ ಹಾಕಿಸಲು ಪ್ರಯತ್ನಿಸಿದರು. ಆದರೆ ಅಕಾಲಿ ಪಕ್ಷದ ಇತರ ಕೆಲವು ಮುಂದಾಳುಗಳು ಉಗ್ರಗಾಮಿಗಳ ಜೊತೆಗೆ ರಾಜಿಮಾಡಿಕೊಂಡು ಅಕಾಲ್ ತಖ್ತ್‌ನಲ್ಲಿ ನಡೆ ನಡೆಸುವ ಕಾರ್‌ಸೇವಾ ಮತ್ತು ಹರ್ಮಿಂದರ್ ಸಾಹಿಬ್‌ನ ಆಡಳಿತೆಯ ಪೂರ್ಣ ಜವಾಬ್ದಾರಿಯನ್ನು ಉಗ್ರಗಾಮಿಗಳ ಕೈಗೆ ಕೊಡುವುದಕ್ಕೆ ಕಾರಣರಾದರು. ಜನವರಿ 26 ರಂದು ನಡೆದ ಸರ್ಬತ್ ಖಾಲ್ಸಾದಲ್ಲಿ ಉಗ್ರಗಾಮಿಗಳು ಎಸ್.ಜಿ.ಪಿ.ಸಿ.ಯನ್ನು ರದ್ದುಗೊಳಿಸಿ ಮುಖ್ಯ ಅರ್ಚಕರನ್ನು ಕಿತ್ತುಹಾಕಿದರಲ್ಲದೆ ಅಕಾಲ್ ತಖ್ತನ್ನು ಕೆಡವಿ ಹೊಸದಾಗಿ ಕಾರ್ ಸೇವಾ ಪ್ರಾರಂಭಿಸಿದರು. ಪಂಜಾಬ್ ಒಪ್ಪಂದವನ್ನು ಮೋಸವೆಂದು ವರ್ಣಿಸಿದ ಉಗ್ರಗಾಮಿಗಳು ಭಾರತದಲ್ಲಿ ಸಿಖ್ಖರು ಗುಲಾಮರಾಗಿದ್ದಾರೆಂದು ಈ ಗುಲಾಮಗಿರಿಯಿಂದ ಬಿಡುಗಡೆ ಹೊಂದುವುದು ಅವರ ಮೂಲಭೂತ ಹಕ್ಕೆಂದೂ ಹೇಳಲಾರಂಭಿಸಿದರು. ಈ ಸಭೆಯಲ್ಲಿ ಖಾಲಿಸ್ತಾನ್ ಪರ ಘೋಷಣೆಗಳನ್ನು ಕೂಗಲಾಯಿತೆಂದೂ ಖಾಲಿಸ್ತಾನ್ ಧ್ವಜವನ್ನು ಹಾರಿಸಲಾಗಿದೆಯೆಂದೂ ತಿಳಿದು ಬಂದಿದೆ. ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಪರೋಕ್ಷ ಅಧಿಕಾರವನ್ನು ಭಿಂದ್ರನ್‌ವಾಲೆಯನ್ನೂ ಒಳಗೊಂಡಂತೆ ಈವರೆಗೆ ಯಾರೂ ಪ್ರಶ್ನಿಸಿರಲಿಲ್ಲ ಎನ್ನುವುದನ್ನು ಗಮನಿಸಬೇಕು. ಉಗ್ರವಾದಿಗಳು, ಎಷ್ಟು ಪ್ರಬಲರಾಗಿದ್ದಾರೆನ್ನುವುದು ಇದರಿಂದ ಗೊತ್ತಾಗುತ್ತದೆ.

ಅಕಾಲಿ ಮುಂದಾಳುತ್ವ ಪ್ರತಿ ಹಂತದಲ್ಲೂ ಶರಣಾಗತಿಯ ಮನೋಭಾವ ತೋರಿಸುತ್ತಾ ಬಂದಿದೆ. ಒಮ್ಮೆ ಅಕಾಲ್ ತಖ್ತ್‌ನಲ್ಲಿ ತಾವು ಸರ್ಬತ್ ಖಾಲ್ಸಾ ನಡೆಸುವುದಾಗಿ ಹೇಳಿದ್ದರೂ ಆಮೇಲೆ ಅದನ್ನು ಆನಂದಪುರ ಸಾಹಿಬ್‌ಗೆ ಸ್ಥಳಾಂತರಿಸುವ ಮೂಲಕ ಅಕಾಲಿ ಮುಂದಾಳುಗಳು ಅಕಾಲ್ ತಖ್ತ್‌ನ ಮೇಲೆ ಉಗ್ರಗಾಮಿಗಳ ಅಧಿಕಾರ ನೆಲೆಗೊಳ್ಳುವಂತೆ ಮಾಡಿದ್ದಾರೆ ಸುವರ್ಣ ಮಂದಿರದಿಂದ ಉಗ್ರಗಾಮಿಗಳನ್ನು ಹೊರಗಟ್ಟುವ ನಿರ್ಣಯವನ್ನು ಆನಂದಪುರ್ ಸಾಹಿಬ್‌ನಲ್ಲಿ ಅಂಗೀಕರಿಸಿ ಹೆಚ್ಚು ಕಡಿಮೆ ಎರಡು ತಿಂಗಳಾದರೂ ಈ ನಿರ್ಣಯ ಕೇವಲ ಕಾಗದ ಪತ್ರದಲ್ಲಿ ಮಾತ್ರ ಉಳಿದಿದೆ ಇದಕ್ಕೆ ಪ್ರತಿಯಾಗಿ ಉಗ್ರಗಾಮಿಗಳು ಇತರ ಗುರುದ್ವಾರಗಳನ್ನೂ ಆಕ್ರಮಿಸಿಕೊಂಡು ತಮ್ಮ ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದಾರೆ.

ಪಾಕಿಸ್ತಾನ ಮತ್ತು ಸಾಮ್ರಾಜ್ಯಶಾಹಿಗಳ ಷಡ್ಯಂತ್ರ

ಇಂದಿನ ಅಂತರಾಷ್ಟ್ರೀಯ ವಿದ್ಯಮಾನಗಳಲ್ಲಿ ಭಾರತದ ಪಾತ್ರ ಮುಖ್ಯವಾದದ್ದು, ನಮ್ಮ ವಿದೇಶಿ ನೀತಿ ಸಾಮ್ರಾಜ್ಯಶಾಹಿಗಳಿಗೆ ಎಳ್ಳಷ್ಟೂ ಮೆಚ್ಚಿಕೆಯಾಗಿಲ್ಲ ಮಾತ್ರವಲ್ಲ ಶಾಂತಿಪರವಾಗಿರುವ ಶಕ್ತಿಗಳಿಗೆ ಉತ್ತೇಜನ ನೀಡಬಲ್ಲ ನಮ್ಮ ಧೋರಣೆಯಿಂದಾಗಿ ಸಾಮ್ರಾಜ್ಯಶಾಹಿಗಳು ತುಂಬಾ ಅಸಂತುಷ್ಟರಾಗಿದ್ದಾರೆ. ಈ ಎಲ್ಲ ಕಾರಣಗಳಿಂದ ಸಾಮ್ರಾಜ್ಯಶಾಹಿಗಳು ನಮ್ಮ ನೆರೆ ಹೊರೆಯ ಎಲ್ಲ ರಾಷ್ಟ್ರಗಳೂ ಭಾರತ ವಿರೋಧಿ ನಿಲುವು ತಳೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ನಮ್ಮ ದೇಶದ ವಿವಿಧ ಭಾಗಗಳಲ್ಲಿ ವಿಭಜನವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳನ್ನು ಹುಟ್ಟಿಸಿ ಅವುಗಳನ್ನು ಉತ್ತೇಜಿಸುವಲ್ಲಿ ನಮ್ಮ ನೆರೆಯ ರಾಷ್ಟ್ರಗಳನ್ನು ಸಾಮ್ರಾಜ್ಯಶಾಹಿಗಳು ಬಳಸಿಕೊಳ್ಳುತ್ತಿದ್ದಾರೆ. ಭಯೋತ್ಪಾದಕರಿಗೆ ಅಮೇರಿಕಾ ಮತ್ತು ಕೆನಡಾಗಳಲ್ಲಿ ತರಬೇತು ನೀಡಲಾಗುತ್ತಿದೆ. ಸಾಮ್ರಾಜ್ಯಶಾಹಿಗಳ ಎಲ್ಲ ಸಮೂಹ ಮಾಧ್ಯಮಗಳಲ್ಲಿ ನಮ್ಮ ದೇಶದಲ್ಲಿ ಭಯೋತ್ಪಾದಕರು ನಡೆಸುತ್ತಿರುವ ಹಾವಳಿಗೆ ಅಪಾರ ಪ್ರಚಾರ ನೀಡಲಾಗುತ್ತಿದೆ.

ಪಂಜಾಬಿನಲ್ಲಿ ದಾಂಧಲೆ ನಡೆಸುತ್ತಿರುವ ಭಯೋತ್ಪಾದಕರಿಗೆ ಪಾಕಿಸ್ತಾನದ ನೆಲದಲ್ಲೇ ತರಬೇತು ನೀಡಿ ಅವರನ್ನು ಭಾರತದೊಳಗೆ ಅಟ್ಟಲಾಗುತ್ತಿದೆ. ಸುವ್ಯವಸ್ಥಿತವಾದ ಭಯೋತ್ಪಾದಕ ತರಬೇತು ಕೇಂದ್ರಗಳು ಪಾಕಿಸ್ತಾನದಲ್ಲಿವೆ. ಇಲ್ಲಿ ಭಯೋತ್ಪಾದಕರಿಗೆ ಎಲ್ಲಾ ನೆರವು ನೀಡಲಾಗುತ್ತಿದೆ. ಪಾಕಿಸ್ತಾನ ನಮ್ಮ ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುತ್ತಿದೆಯೆಂದು ಶ್ರೀ ಬರ್ನಾಲಾ ಅವರೇ ಕೆಲವು ಬಾರಿ ಹೇಳಿಕೊಂಡಿದ್ದಾರೆ ಬರ್ನಾಲಾ ಅವರ ಬಳಿ ಇದಕ್ಕೆ ತಕ್ಕ ಪುರಾವೆಯೂ ಇರಬಹುದು ಹಾಗಿರುವಾಗ ಪಂಜಾಬ್‌ನಲ್ಲಿ ನಡೆಯುತ್ತಿರುವ ಹಿಂಸಾಕಾಂಡಕ್ಕೆ ಕಾಂಗ್ರೆಸ್ ಸರಕಾರವನ್ನು ಮಾತ್ರ ದೂರಿದರೆ ಪ್ರಯೋಜನವಿಲ್ಲ ಉಗ್ರಗಾಮಿಗಳನ್ನು ವಿನಂತಿಗಳ ಮೂಲಕ ಸರಿ ದಾರಿಗೆ ತರಬಹುದೆನ್ನುವ ಭ್ರಮೆಯೂ ಸರಿಯಲ್ಲ ಉಗ್ರಗಾಮಿಗಳ ಚಟುವಟಿಕೆ ಮತ್ತು ಅವರ ಹಿಂದಿರುವ ಶಕ್ತಿಗಳು ಯಾರೆಂದು ಗೊತ್ತಾದ ಮೇಲೂ ಅವರ ಬಗ್ಗೆ ದಾಕ್ಷಿಣ್ಯದ ನಿಲುವು ತೋರಿಸುವುದು ತುಂಬಾ ಅಪಾಯಕಾರಿ. ರಾಜಕೀಯದ ಜೊತೆಗೆ ಧರ್ಮವನ್ನು ಬೆರೆಸುವುದರಿಂದ ಜನ ಸಾಮ್ಯವಾದಿಗಳಾಗುವುದಿಲ್ಲ ಈ ಕೆಲಸ [illegible] ಧಾರ್ಮಿಕ ಮೂಲಭೂತವಾದಿಗಳಿಗೆ ಬೇಕು.

ಹರಿಕಿಶನ್ ಸಿಂಗ್ ಸುರ್ಜಿತ್

ಪಂಜಾಬ್‌ನಲ್ಲಿ ನಡೆಯುತ್ತಿರುವುದು ಇದೇ.

ಹಿಂದೂ ಕೋಮುವಾದಿಗಳ ಪಾತ್ರ

ಹಿಂದೂ ಶಿವ ಸೇನೆ ಎಂಬ ಹೆಸರಿನಲ್ಲಿ ಹಿಂದೂ ಕೋಮುವಾದಿಗಳು ಅಲ್ಪ ಸಂಖ್ಯಾತರ ಸಹಜವಾದ ಭಯ ಸಂದೇಹಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಹಲವಾರು ನಗರಗಳಲ್ಲಿ ಕರ್ಫ್ಯೂ ಜಾರಿಯಾಗಿದ್ದರೆ ಅದಕ್ಕೆ ಹಿಂದೂ ಕೋಮುವಾದಿಗಳೂ ಉಗ್ರಗಾಮಿಗಳಷ್ಟೇ ಕಾರಣ. ಉಗ್ರಗಾಮಿಗಳಂತೆಯೇ ಇವರೂ ಅಕಾಲಿ ಸರ್ಕಾರ ರಾಜಿನಾಮೆ ನೀಡಬೇಕೆಂದೂ ರಾಷ್ಟ್ರಪತಿ ಆಡಳಿತ ಜಾರಿಯಾಗಬೇಕೆಂದೂ ಹೇಳುತ್ತಿದ್ದಾರೆ. ಇವರಿಬ್ಬರೂ ಸಾಗುತ್ತಿರುವ ದಾರಿ ಒಂದೇ. ಇತರ ಪ್ರತಿಪಕ್ಷಗಳ ಪಾತ್ರವೂ ಅಷ್ಟೇ ಬೇಜವಾಬ್ದಾರಿತನದ್ದಾಗಿದೆ. ಈ ಪಕ್ಷಗಳು ಸಂಸತ್ತಿನಲ್ಲಿ ಪಂಜಾಬ್ ಒಪ್ಪಂದವನ್ನು ಬೆಂಬಲಿಸಿವೆ. ಆದರೆ ಹರ್ಯಾಣದ ಅವುಗಳ ರಾಜ್ಯ ಘಟಕಗಳು ಪಂಜಾಬ್ ಒಪ್ಪಂದದಲ್ಲಿ ಹರಿಯಾಣದ ಹಿತಾಸಕ್ತಿಗಳನ್ನು ಬಲಿಗೊಡಲಾಗಿದೆಯೆಂಬ ಅಪಪ್ರಚಾರ ಮಾಡುತ್ತಿವೆ. ಜಿಂದ್‌ನಲ್ಲಿ ಮಾರ್ಚ್ 22 ರಂದು ನಡೆಸಲಾದ ಸಮಸ್ತ ಹರ್ಯಾಣಾ ರ್ಯಾಲಿಯಲ್ಲಿ ಇದು ಇನ್ನಷ್ಟು ರುಜುವಾತಾಗಿದೆ. ಈ ಸಭೆಯಲ್ಲಿ ಬಿ ಜೆ ಪಿಯ ಮುಖಂಡರಾದ ಮಂಗಲ್ ಸೇನ್ ಮಾಡಿದ ಭಾಷಣ ಕೋಮುವಾರು ವಿಭಜನೆಗೆ ಬಹಿರಂಗ ಪ್ರಚೋದನೆಯಾಗಿತ್ತು. ಎಲ್ಲಾ ವಿರೋಧ ಪಕ್ಷಗಳೂ ಅವುಗಳ ರಾಷ್ಟ್ರೀಯ ಘಟಕಗಳೂ ಕೇವಲ ಚುನಾವಣೆಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಸಂಕುಚಿತ ದೃಷ್ಟಿಯ ವರ್ತನೆಯ ಮೂಲಕ ದೇಶದ ಹಿತಾಸಕ್ತಿಯನ್ನು ಬಲಿಗೊಡುತ್ತಿವೆ.

ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷವೂ ಅಷ್ಟೇ ಅಪರಾಧಿ. ಕೇಂದ್ರ ಸರ್ಕಾರವು ಪಂಜಾಬ್ ಸಮಸ್ಯೆಯನ್ನು ತೀರಾ ಹಗುರವಾಗಿ ಪರಿಗಣಿಸುತ್ತಿದೆ ಇಲ್ಲವಾದರೆ ಪಂಜಾಬ್ ಒಪ್ಪಂದವನ್ನು ಪೂರ್ಣವಾಗಿ ಅನುಷ್ಠಾನಕ್ಕೆ ತರುವುದರಲ್ಲಿ ವಿನಾ ಮೇಷ ಎಣಿಸುತ್ತಿರುವುದು ಏಕೆ ? ಇನ್ನಾದರೂ ಕೇಂದ್ರ ಸರ್ಕಾರ ಎಚ್ಚೆತ್ತು ಚಂಡೀಘರ್‌ನ್ನು ಪಂಜಾಬಿಗೂ ಪಂಜಾಬಿನ ಹಿಂದಿ ಮಾತಾಡುವ ಪ್ರದೇಶಗಳನ್ನು ಹರ್ಯಾಣಾಕ್ಕೂ ಏಪ್ರಿಲ್ 13ರ ಮೊದಲು ವರ್ಗಾಯಿಸಬೇಕು ನದಿ ನೀರಿನ ವಿವಾದವನ್ನು ಕೂಡಲೇ ತೀರ್ಮಾನಿಸಬೇಕು. ಸಟ್ಲೆಜ್ ಯಮುನಾ ಜೋಡಣೆ ಕಾಲುವೆಯನ್ನು ಶೀಘ್ರವಾಗಿ ನಿರ್ಮಿಸಬೇಕು. ಪಂಜಾಬು

(6ನೇ ಪುಟ ನೋಡಿ)

ಭಾರತದಲ್ಲಿ ಭೂ ಸುಧಾರಣೆ

ಪಿ. ರಾಮಚಂದ್ರರಾವ್

ಭೂಸುಧಾರಣೆಗಳು ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಪೂರ್ಣ ಅವಶ್ಯಕ ವಾಗಿದೆ ಆದರೆ ಕಾಂಗ್ರೆಸ್ಸಿನ ಬಂಡವಾಳಶಾಹಿ-ಭೂಮಾಲಿಕ ವರ್ಗ ನೀತಿ ಆಧರಿತ ಭೂಸುಧಾರಣೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿಫಲವಾಗಿದೆ. ಸ್ವಾತಂತ್ರ್ಯ ನಂತರ ಜಾರಿಗೆ ಬಂದ ಭೂಸುಧಾರಣೆಗಳು ಕೃಷಿ ವ್ಯವಸ್ಥೆಯಲ್ಲಿ ಅವಶ್ಯಕವಾದ ಬದಲಾವಣೆಗಳನ್ನು ತರುವಲ್ಲಿ ವಿಫಲವಾಗಿವೆ. ಅವು ಆಡಳಿತ ವರ್ಗಗಳ ಹಿತಗಳನ್ನು ಮಾತ್ರ ರಕ್ಷಿಸಿಕೊಂಡು ಬಂದಿವೆ. ಗ್ರಾಮಾಂತರ ಪ್ರದೇಶಗಳ ಮಿಲಿಯಾಂತರ ಜನರ ಮನಸ್ಸಿನಲ್ಲಿ ಭ್ರಮೆ ಹುಟ್ಟಿಸಿ ಅವರ ಮತಗಳನ್ನು ಕಾಂಗ್ರೆಸ್ ಪಕ್ಷಕ್ಕೆ ಗಳಿಸಲು ಸಹಾಯಕವಾಗಿದೆಯಷ್ಟೆ.

ಕಾಂಗ್ರೆಸ್ ಭೂಸುಧಾರಣೆಗಳ ಈ ತನಕದ ಉದ್ದೇಶವು ಭೂಮಾಲಕ ಪದ್ಧತಿಯ ನಿರ್ಮೂಲವಾಗಿರಲಿಲ್ಲ. ಬದಲು ಪಾಳೆಯಗಾರಿ, ಅರೆಪಾಳೆಯ ಗಾರಿ, ಭೂಮಾಲಕ ಬಂಡವಾಳಶಾಹಿ ಭೂಮಾಲೀಕರನ್ನಾಗಿ ಬದಲಾವಣೆ ಮಾಡುವುದು ಉದ್ದೇಶ-ವಾಗಿತ್ತು. ಶ್ರೀಮಂತ ರೈತರ ಒಂದು ಭಾಗವನ್ನು ಸೃಷ್ಟಿಸಿ ತಮ್ಮ ಪಕ್ಷದ ಗ್ರಾಮಾಂತರ ತಳಹದಿಯನ್ನು ವಿಸ್ತರಿಸುವುದು ಅವುಗಳ ಉದ್ದೇಶವಾಗಿತ್ತು. ಆಗಲೇ ಅಸ್ತಿತ್ವದಲ್ಲಿದ್ದ ಶೋಷಣೆ ಇನ್ನಷ್ಟು ತೀವ್ರ ವಾಯಿತು

ಕಾಂಗ್ರೆಸ್ ಪಕ್ಷ ಯಾವಾಗಲೂ ಭೂಸುಧಾರಣೆಗಳನ್ನು ಬುಡಮೇಲು ಮಾಡುತ್ತಾ ಬಂದಿದೆ. ತೀವ್ರಭೂಸುಧಾರಣೆಗಳಾಗಬೇಕೆಂದು ಕಾಗದದ ಮೇಲೆ ಮಾತ್ರ ಒತ್ತಿ ಹೇಳುತ್ತಾ ಬಂದಿದೆ, ಕ್ರಮವಿಲ್ಲ. ಅನೇಕ ಭೂಸುಧಾರಣೆಗಳನ್ನು ಜಾರಿಗೆ ತಂದ ವಿಧಾನಗಳನ್ನು ಸಮೀಪದಲ್ಲಿ ಪರಿಶೀಲಿಸಿದರೆ ಕಾಂಗ್ರೆಸ್‌ನ ಈ ದ್ವಿಮುಖ ಸ್ವಭಾವವು ಸಾಧಿಸಲ್ಪಡುವುದು

ಸ್ವಾತಂತ್ರ್ಯ ಪೂರ್ವದಲ್ಲಿ

'ಉಳುವವನಿಗೆ ಭೂಮಿ' ಎಂಬ ಘೋಷಣೆಯ ಮೂಲಕ ರೈತ ಸಮೂಹಗಳನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಅಣಿ ನೆರೆಸಲಾಯಿತು. ಅಖಿಲ ಭಾರತ ಕಿಸಾನ್ ಸಭಾ ಇದರಲ್ಲಿ ದೊಡ್ಡ ಪಾತ್ರ ವಹಿಸಿತ್ತು. ಆದ್ದರಿಂದ ಭೂಸುಧಾರಣೆಯ ಪ್ರಶ್ನೆ ಭಾರತದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬೇಡಿಕೆಯ ಅವಿಭಾಜ್ಯ ಅಂಗವಾಗಿತ್ತು

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದ ವೇಳೆ ಪಾಳೆಯಗಾರಿ ವಿರೋಧಿ ಘೋಷಣೆಗಳನ್ನು ಕೊಡುವ ನಿರ್ಬಂಧಿತವಾಗಿತ್ತು. 1931ರ ಕರಾಚಿ ನಿರ್ಣಯವನ್ನು ಮತ್ತು 1936ರ ಲಕ್ನೋ ಹಾಗೂ ಫೈಜ್‌ಪುರ ಗೊತ್ತುವಳಿಗಳು ಗೇಣಿ ರಹಿತ, ಕೃಷಿ ಆದಾಯ ತೆರಿಗೆಗಾಗಿ ಕರೆ ಕೊಟ್ಟಿತ್ತು ಆದರೆ ಇವುಗಳಿಗಿಂತ ಮುಂದೆ ಹೋಗಲು ಅದರಿಗೆ ಇಚ್ಛೆ ಇರಲಿಲ್ಲ. ಏಕೆಂದರೆ ಪಾಳೆಯಗಾರಿ ವಿಭಾಗಗಳು ತಮ್ಮಿಂದ ದೂರ ಹೋಗಬಹುದೆಂಬ ಹೆದರಿಕೆಯಿತ್ತು.

1945-46ರ ರಾಷ್ಟ್ರೀಯ ವಿಸ್ತೃತ ಆಂದೋಲನದ ವೇಳೆಯಲ್ಲಿ ಸರಕಾರ ಮತ್ತು ಗೇಣಿದಾರ ರೈತರ ನಡುವಿನ ಎಲ್ಲ ಮಧ್ಯವರ್ತಿಗಳನ್ನು ರದ್ದುಪಡಿಸುತ್ತೇವೆನ್ನುವ ಆಶ್ವಾಸನೆಯನ್ನು ಕೊಡಬೇಕಾಯಿತು ಈ ಮಧ್ಯವರ್ತಿಗಳಿಗೆ ನ್ಯಾಯವಾದ ಪರಿಹಾರವನ್ನು ಕೊಡಲಾಗುವ ಭರವಸೆಯನ್ನೂ ಕಾಂಗ್ರೆಸ್ ಕೊಟ್ಟಿತ್ತು

ರೈತ ಚಳುವಳಿಗಳು

ಈ ವೇಳೆಗೆ ಉತ್ಪಾದನಾ ಶಕ್ತಿಗಳಿಗೂ ಉತ್ಪಾದನಾ ಸಂಬಂಧಗಳಿಗೂ ನಡುವಣ ಮೂಲಭೂತ ವೈರುಧ್ಯವು ಗ್ರಾಮಾಂತರ ಪ್ರದೇಶದಲ್ಲಿ ತೀವ್ರಗೊಂಡಿತು. ಒಂದು ಪ್ರಬಲವಾದ ಸಾಮೂಹಿಕ ಚಳುವಳಿ ದೇಶಾದ್ಯಂತ ಹರಡಿತು ಆ ಚಳುವಳಿ ಪಾಳೆಯಗಾರಿ ವಿರೋಧಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿಯಾಗಿತ್ತು 1946ರ ಅಂತ್ಯಕ್ಕೆ ಹಾಗೂ 47ರ ಆರಂಭಕ್ಕೆ ದೇಶದಲ್ಲಿ ರೈತ ಚಳುವಳಿ ಪರಾಕಾಷ್ಠತೆಗೆ ಮುಟ್ಟಿತು ಅದು ವಿವಿಧ ರಾಜ್ಯಗಳಿಗೆ ಹರಡಿತ್ತು. ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ಪಂಜಾಬ್ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕೇರಳಗಳಲ್ಲಿ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವ ಕೊಟ್ಟಿತು. 1945ರಲ್ಲಿ ಕಿಸಾನ್ ಸಭಾ ಸದಸ್ಯತ್ವ 8,25,0.0 ಕ್ಕೇರಿತು ತೆಲಂಗಾಣ ಹೋರಾಟದಲ್ಲಿ 3000 ಗ್ರಾಮಗಳಲ್ಲಿ 18 ತಿಂಗಳಕಾಲ ನಮ್ಮ ರೈತರ ಗ್ರಾಮ ಸಮಿತಿಗಳು ಆಡಳಿತ ಮಾಡಿದವು.

1948 ರಿಂದ 51ರವರೆಗೆ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ರೈತ ಚಳುವಳಿಯನ್ನು ನಡೆಸಬೇಕಾಗಿತ್ತು. ಅತ್ಯಂತ ಕಠಿಣತರ ದಬ್ಬಾಳಿಕೆಯನ್ನು ಕಾಂಗ್ರೆಸ್ ಸರ್ಕಾರಗಳು ನಡೆಸುತ್ತಿದ್ದವು

ಸ್ವಾತಂತ್ರ್ಯ ನಂತರ

ಇದರ ಪರಿಣಾಮವಾಗಿ ಕೊನೆಗೆ ಹಿಂತೆಗೆದರೂ ರೈತರ ಭೂಪ್ರಶ್ನೆಯನ್ನು ದೇಶದ ಮುಂದೆ ತರುವುದರಲ್ಲಿ ತೆಲಂಗಾಣ ಹೋರಾಟ ಯಶಸ್ವಿಯಾಯಿತು ಇದರ ಫಲವಾಗಿ ಒಂದು ಸಮಿತಿ ರಚಿಸಲ್ಪಟ್ಟು ಅದರ ಶಿಫಾರಸಿನಂತೆ ನೆಹರೂ ಆರ್ಥಿಕ ಧೋರಣೆಯು 1948ರಲ್ಲಿ ಅಂಗೀಕರಿಸಲಾಯಿತು ಅದರಲ್ಲಿ ಭೂಸಂಬಂಧಗಳಲ್ಲಿ ಮಧ್ಯವರ್ತಿಗಳ ನಿರ್ಮೂಲನಕ್ಕೆ ಕರೆ ಕೊಟ್ಟಿತು 1947ರಲ್ಲಿ ದೆಹಲಿಯಲ್ಲಿ ಎಲ್ಲಾ ರಾಜ್ಯಗಳ ರೆವಿನ್ಯೂ ಸಚಿವರ ಸಭೆ ನಡೆಯಿತು ಅದರಲ್ಲಿ ಗಾಂಧಿವಾದಿ ಅರ್ಥಶಾಸ್ತ್ರಜ್ಞ ಜೆ ಸಿ ಕುಮಾರಪ್ಪನವರ ಅಧ್ಯಕ್ಷತೆಯಲ್ಲಿ ಭೂ ಸುಧಾರಣಾ ಸಮಿತಿ ರಚಿಸಲಾಯಿತು. ಇವರು ಎಲ್ಲ ರೀತಿಯ ಪಾಳೆಯಗಾರೀ ಶೋಷಣೆಯನ್ನು ಕೂಡಲೇ ರದ್ದು ಮಾಡಲು ಶಿಫಾರಸು ಮಾಡಿದರಾದರೂ ಭೂ ಕೇಂದ್ರೀಕರಣವನ್ನು ಅಲುಗಾಡಿಸುವ ಭೂ ಪರಿಮಿತಿಯ ಬಗ್ಗೆ ಚಕಾರವೆತ್ತಿರಲಿಲ್ಲ ಒಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಮಾಲೀಕರು ತಮ್ಮ ಸ್ವಂತ ಒಡೆತನವೆಂದು ಹೇಳಿದ ವಿಸ್ತಾರ್ಣದ ಭೂಮಿಯನ್ನು ಮುಟ್ಟಲಿಲ್ಲ. ಈ ಬಗ್ಗೆ ಕಾಂಗ್ರೆಸ್ಸಿನ ಒಳಗೇ ಇದ್ದ ಸಮಾಜವಾದಿ ಕಾರ್ಯಾಚರಣೆ ಫೋರಂ, ಒಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಪರಿಮಿತಿಯ ಪ್ರಶ್ನೆಯೇ ಇರಲಿಲ್ಲವೆಂಬುದು ಅರ್ಥಗರ್ಭಿತವೂ ಕುತೂಹಲಕಾರಿಯೂ ಆದ ಅಂಶವಾಗಿತ್ತು. ರಾಷ್ಟ್ರಾದ್ಯಂತ ತೀವ್ರ ಟೀಕೆಗೆ ಗುರಿಯಾದ ಮೇಲೆಯೇ ಈ ಅಂಶವನ್ನು ಮೊದಲನೇ ಯೋಜನೆಯಲ್ಲಿ ಸೇರಿಸಲಾಯಿತು ಎಂದು ಹೇಳಿದೆ.

ಈ ಅಲ್ಪ ಬದಲಾವಣೆಯ ಪ್ರಯತ್ನವೂ ಸುಪ್ರೀಂ ಕೋರ್ಟಿನಲ್ಲಿ ಸಂವಿಧಾನದ 14, 19 ಹಾಗೂ 31ನೇ ಕಲಂ ಪ್ರಕಾರ ಪ್ರಶ್ನಿತವಾಯಿತು ಇಲ್ಲಿಯವರೆಗೂ ಸಂವಿಧಾನಕ್ಕೆ ಆದ ತಿದ್ದುಪಡಿಗಳಲ್ಲಿ 31ನೇ ಕಲಂಗೆ ಮಾಡಿದ ತಿದ್ದುಪಡಿಗಳೇ 32 ಎಂದರೇ ಸರ್ಕಾರದ ವರ್ಗಗುಣ ವ್ಯಕ್ತವಾಗುತ್ತದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ನೇತೃತ್ವದಲ್ಲಿ ಬೆಳೆದು ಬರುತ್ತಿದ್ದ ರೈತ ಚಳುವಳಿಯು ಆಡಳಿತ ಪಕ್ಷಕ್ಕೆ ಒಂದು ಸವಾಲಾಗಿ ಮೂಡಿ ಬಂತು. ಈ ಒತ್ತಡಕ್ಕೆ ಮಣಿದು 1951 ರಲ್ಲಿ ಹಾಗೂ 1954 ರಲ್ಲಿ ಭೂ ಸುಧಾರಣಾ ಕಾನೂನುಗಳಿಗೆ ಕೋರ್ಟುಗಳಲ್ಲಿ ಪ್ರಶ್ನಿಸಲಾಗದಂತೆ ತಿದ್ದುಪಡಿ ತರಬೇಕಾಯಿತು. ಭೂ ಪರಿಮಿತಿಯ ವಿಷಯದಲ್ಲಿ 2ನೇ ಯೋಜನೆ ಮುನ್ನಡೆ ಸಾಧಿಸಿದರೂ ರಾಜ್ಯ ಸರ್ಕಾರಗಳಿಗೆ ಅವರ ಇಚ್ಛೆಯಂತೆ ಪರಿಮಿತಿಯನ್ನು ವ್ಯಕ್ತಿಗಾಗಲೀ ಕುಟುಂಬಕ್ಕಾಗಲಿ ನಿರ್ಧರಿಸುವ ಸ್ವಾತಂತ್ರ್ಯವನ್ನು ಕೊಟ್ಟಿದ್ದರಿಂದ ಕಾನೂನು ಜಾರಿ ಕುಂಠಿತವಾಯಿತು ಮೂರನೇ ಯೋಜನೆಯಲ್ಲಿ ಇದನ್ನೇ ಮುಂದುವರಿಸಲಾಯಿತು

1967 ಮತ್ತು ನಂತರ

1967 ರಲ್ಲಿ ಕಾಂಗ್ರೆಸ್ ಪಕ್ಷ 9 ರಾಜ್ಯಗಳಲ್ಲಿ ಸೋಲುಂಡು ಸಂಯುಕ್ತ ರಂಗಗಳು ಅಧಿಕಾರಕ್ಕೆ ಬಂದವು. ಪಶ್ಚಿಮ ಬಂಗಾಲದಲ್ಲಿ, ಕೇರಳದಲ್ಲಿ ಎಡ ಪಕ್ಷಗಳು ಪ್ರಧಾನ ಪಾತ್ರ ವಹಿಸಿದ ರಂಗಗಳು ಅಧಿಕಾರಕ್ಕೆ ಬಂದುದು ಹೊಸ ಪರಿಸ್ಥಿತಿಯನ್ನು ಸೃಷ್ಟಿಸಿತು. ತಾನು ಕಳೆದುಕೊಳ್ಳುತ್ತಿರುವ ಜನ ಬೆಂಬಲವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಜೂನ್ 1967 ರಲ್ಲಿ ತೀವ್ರ ಭೂ ಸುಧಾರಣೆಯನ್ನೊಳಗೊಂಡ 10 ಅಂಶದ ಕಾರ್ಯಕ್ರಮವನ್ನು ಅಂಗೀಕರಿಸಿತು.

ಅಧಿಕಾರ ವಹಿಸಿದ ಕಮ್ಯುನಿಸ್ಟ್ ನೇತೃತ್ವದ ಸಂಯುಕ್ತ ರಂಗ ಸರ್ಕಾರಗಳು ಸೀಮಿತ ಅಧಿಕಾರದ ಮಿತಿಯ ಒಳಗೆ ಭೂ ಸುಧಾರಣೆಗಳನ್ನು ಜ್ಯಾರಿಗೊಳಿಸಲು ಹೆಜ್ಜೆಗಳನ್ನು ಇಟ್ಟಿತು. ಬೇನಾಮೆಯಲ್ಲಿರುವ ಲಕ್ಷಗಟ್ಟಲೆ ಎಕ್ರೆ ಭೂಮಿಯನ್ನು ವಶಪಡಿಸಿ 2 ಎಕ್ರೆಯಂತೆ ರೈತರಿಗೆ, ಕೃಷಿ ಕೂಲಿಗಾರರಿಗೆ ಹಂಚಿಕೊಟ್ಟಿತು. ಕಾಂಗ್ರೆಸ್ಸು ರೆವೆನ್ಯೂ ಅಧಿಕಾರಗಳ ಮೇಲೆ ಅವಲಂಬಿಸಿ ಭೂ ಸುಧಾರಣೆಗಳನ್ನು ಜ್ಯಾರಿಗೊಳಿಸುತ್ತಿತ್ತು ಅದೇ ವೇಳೆ ರೈತರ ಸಂಘಟಿತ ಶಕ್ತಿಯನ್ನು ದಬ್ಬಾಳಿಕೆ ಮಾಡಿ ಹಿಮ್ಮೆಟ್ಟಿಸುತ್ತಿತ್ತು. ಆದರೆ ಎಡರಂಗದ ಸರಕಾರವು ರೈತರೇ ಮುಂದೆ ಬಂದು ಭೂಮಿಯನ್ನು ವಶಪಡಿಸಿ ಕಾನೂನನ್ನು ಜ್ಯಾರಿ ಮಾಡಬೇಕೆಂದು ಕರೆ ಕೊಟ್ಟಿತು. ರೆವೆನ್ಯೂ ಆಫೀಸರರು ಭೂ ಮಾಲಕರ ಜತೆ ಸೇರಿ ಕಾನೂನು ಮುರಿಯದಂತೆ ನೋಡಿಕೊಂಡಿತು, ಅಧಿಕಾರಿಗಳು ಕಿಸಾನ್ ಸಭಾ ಘಟಕಗಳನ್ನು ಸಂಪರ್ಕಿಸಿ ಸಲಹೆ ಪಡೆಯಬೇಕೆಂದು ಸಲಹೆ ಮಾಡಿತು. ಈ ಕ್ರಮಗಳಿಂದ ರೈತರಿಗೆ ಉತ್ಸಾಹ ಬಂತು

1967ರ ಮಧ್ಯದವರೆಗೆ ಸುಮಾರು ನಾಲ್ಕೂವರೆ ಲಕ್ಷ ಎಕ್ರೆ ಭೂ ಪರಿಮಿತಿಗಿಂತ ಅಧಿಕ ಭೂಮಿ ಸರಕಾರದ ವಶಕ್ಕೆ ಬಂದಿದ್ದರೂ ಕಾಂಗ್ರೆಸ್ಸು ಸರಕಾರವು ಆ ಭೂಮಿಯು ಹಳೆ ಭೂ ಮಾಲಕರ ಕೈವಶದಲ್ಲೇ ಇರುವಂತೆ ನೋಡಿಕೊಂಡಿತ್ತು ಇನ್ನೂ 1 ಲಕ್ಷ ಎಕ್ರೆ ಭೂಮಿ ಕೋರ್ಟುಗಳಲ್ಲಿ ವಿವಾದದಲ್ಲಿತ್ತು. ಸಂಯುಕ್ತ ರಂಗ ಸರಕಾರವು 1967 ರಲ್ಲಿ 2 ಲಕ್ಷ 30 ಸಾವಿರ ಎಕ್ರೆಯನ್ನು ಭೂ ರಹಿತರಿಗೆ ಮತ್ತು ಬಡ ರೈತರಿಗೆ ಹಂಚಿ ಕೊಟ್ಟಿತು ಅಲ್ಲದೆ ಪುನ: 4 ಲಕ್ಷ ಎಕ್ರೆ ಅಧಿಕ ಬೇನಾಮೆ ಭೂಮಿಯನ್ನು ಗುರುತಿಸಿತು.

ಕೇರಳದಲ್ಲಿ ಭೂಸುಧಾರಣ (ತಿದ್ದುಪಡಿ) ಮಸೂದೆ ಜ್ಯಾರಿಗಾಗಿ, ಸಾಲ ರದ್ಧತಿ ಮಸೂದೆ ಜ್ಯಾರಿಗಾಗಿ, ಪಟ್ಟಾ ವಿತರಣೆಗಾಗಿ, 1 ಲಕ್ಷ ಎಕ್ರೆ ಭೂಮಿ ಪಟ್ಟಾಕ್ಕಾಗಿ ಪ್ರಬಲವಾದ ಹೋರಾಟವು ನಡೆದು ಭೂ ಸುಧಾರಣ ತಿದ್ದುಪಡಿ ಕಾನೂನು ಅಂಗೀಕಾರವಾಯಿತು. ಇಡೀ ದೇಶದಲ್ಲಿ ರೈತರಲ್ಲಿ ಒಂದು ಹೊಸ ಎಚ್ಚರಿಕೆ ಮತ್ತು ಉತ್ಸಾಹ ತುಂಬಿ ಬಂತು ಪುನ: ಭೂ ಸುಧಾರಣೆಯ ಪ್ರಶ್ನೆಯು ದೇಶದ ಮುಂದೆ ಬಂದು ನಿಂತಿತು.

ಇದು ಭೂ ಸುಧಾರಣೆಯ ಬಗ್ಗೆ ಕಾಂಗ್ರೆಸ್ಸು ಪಕ್ಷದ ಮತ್ತು ಸರಕಾರದ ಧೋರಣೆಗಳ ವಿಫಲತೆಯನ್ನು ಬಯಲಿಗೆಳೆಯಿತು. ದೇಶದಾದ್ಯಂತವಾಗಿ ರೈತರು ತಮ್ಮ ಬೇಡಿಕೆಗಳಿಗಾಗಿ ಹೋರಾಡುವ ವಾತಾವರಣವನ್ನು ಸೃಷ್ಟಿ ಮಾಡಿತು.

ಆದ ಕಾರಣ, 1969 ರಲ್ಲಿ ಕಾಂಗ್ರೆಸ್ಸು ವಿಭಜಿತವಾಗಿ ತೀವ್ರ ಭೂ ಸುಧಾರಣೆಯ ನೀತಿಯನ್ನು ವಹಿಸಲು ನಿರ್ಬಂಧಿತವಾಯಿತು. ಕೃಷಿಯ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷವು ತೀವ್ರ ಭೂ ಸುಧಾರಣೆ ತಿದ್ದುಪಡಿಯು ಅವಶ್ಯವೆಂಬುದನ್ನು ಒಪ್ಪಲು ನಿರ್ಬಂಧಿತವಾಯಿತು ಅತನಕ 4ನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜುಗಳು ಭೂ ಸುಧಾರಣೆ ಕೇವಲ ಸಾಮಾಜಿಕ ನ್ಯಾಯವನ್ನು ಮಾತ್ರ ಒಪ್ಪಿಕೊಂಡಿತ್ತು. ಅದು ಕೃಷಿಯಲ್ಲಿ ಉತ್ಪಾದನಾ ಶಕ್ತಿಗಳನ್ನು ಹೊರಗೆಡಹುದಕ್ಕೆ ಅವಶ್ಯಕವೆಂಬುದನ್ನು ಮನಗಾಣಲಿಲ್ಲ.

ಕೇಂದ್ರ ಸರಕಾರವು 1970-71 ರಲ್ಲಿ ಭೂ ಸುಧಾರಣೆಗಳನ್ನು ತುರ್ತಾಗಿ ಜ್ಯಾರಿಗೊಳಿಸಬೇಕೆಂದು ಒತ್ತಾಯ ಮಾಡಿತು. ಅಧಿಕ ಭೂಮಿಯನ್ನು ಭೂ ರಹಿತರಿಗೆ ಹಂಚಿ ಕೊಡಬೇಕೆಂದು ಒತ್ತಾಯ ಮಾಡಿತು.

4ನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜಿನಲ್ಲಿ 1969 ರಲ್ಲಿ ಈ ಕರ್ತವ್ಯದ ನಿರೂಪಣೆ ಇತ್ತು.

ಆದರೂ ರೈತರ ಮತ್ತು ಕೃಷಿ ಕೂಲಿಗಾರರ ದು:ಸ್ಥಿತಿ ಬದಲಾಗಲಿಲ್ಲ.

ಭೂಮಿಯು ಜೀವನದ ಮುಖ್ಯ ಮೂಲವಾದುದರಿಂದ ಭೂಮಿಯ ಬೇಡಿಕೆಯು ಕೃಷಿಕ ಹೋರಾಟದ ಮುಖ್ಯ ಬೇಡಿಕೆಯಾಯಿತು. ಭೂ ಸುಧಾರಣೆ ಕಾನೂನುಗಳ ಪೂರ್ವದಲ್ಲಿ ದೊಡ್ಡ ಪ್ರಮಾಣದಲ್ಲಿ ಒಕ್ಕಲೆಬ್ಬಿಸುವಿಕೆಯ ವಿರುದ್ಧ ಹೋರಾಟವು ಬೆಳೆಯಿತು.

ಬೇನಾಮೆ ಭೂಮಿಯನ್ನು ಮತ್ತು ಬಂಜರು ಭೂಮಿಯನ್ನು ಭೂ ರಹಿತರೂ ಬಡ ರೈತರೂ ಬಲಾತ್ಕಾರವಾಗಿ ಆಕ್ರಮಣ ಮಾಡಲು ಆರಂಭಿಸಿದಾಗ ರೈತರ ಚಳುವಳಿಯಲ್ಲಿ ಒಂದು ಹೊಸ ತಿರುವು ಉಂಟಾಯಿತು

ಕೇರಳದಲ್ಲಿ ಗುಡಿಸಲು ವಾಸಿಗಳ ಚಳುವಳಿಯು ಜನವರಿ 1, 1970ರಲ್ಲಿ ಚರಿತ್ರಾರ್ಹ ಹೋರಾಟವಾಯಿತು.

1966 ರ ನಂತರದ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಷಿಕ ಘರ್ಷಣೆಗಳ ಕಾರಣಗಳನ್ನು ಪರಿಶೀಲಿಸುತ್ತಾ ಗೃಹ ಶಾಖೆಯು 1967 ರ ಒಂದು ಅಭ್ಯಾಸದಲ್ಲಿ "ಇತ್ತೀಚಿಗೆ ಗ್ರಾಮಾಂತರದಲ್ಲಿ

ಗೇಣಿದಾರರ ಮತ್ತು ಭೂ ಮಾಲಕರ ನಡುವಿನ ತಿಕ್ಕಾಟವು, ಕೃಷಿ ಕೂಲಿಗಾರರ ಮತ್ತು ಗೇಣಿದಾರರ ನಡುವಿನ ತಿಕ್ಕಾಟವು, ಬಡ ರೈತ ಮತ್ತು ದೊಡ್ಡ ಭೂ ಮಾಲಕರ ನಡುವಿನ ತಿಕ್ಕಾಟವು ಪ್ರಬಲಗೊಳ್ಳುತ್ತಾ ಬಂದಿವೆ. ಈ ಮೂರು ತರದ ಘರ್ಷಣೆಗಳಲ್ಲಿ, ಭೂ ರಹಿತರ ಮತ್ತು ಬಡ ರೈತರ ಭೂ-ಹಂಚಿಕೆಗಾಗಿ ನಡೆಯುವ ಹೋರಾಟವು ಅತ್ಯಂತ ಅಧಿಕ ಮಂದಿಯನ್ನು ಒಳಗೊಂಡಿತ್ತು ಮತ್ತು ವಿಶಾಲ ಪ್ರದೇಶಗಳಲ್ಲಿ ಹರಡಿಕೊಂಡಿತ್ತು." "ಮತ್ತು ಇವುಗಳಲ್ಲಿ ಶೇಕಡಾ 82ರಷ್ಟು ಹೋರಾಟವು ಬಡ ರೈತರ ಮತ್ತು ಕೃಷಿ ಕೂಲಿಕಾರರ ನೇತೃತ್ವದಲ್ಲಿ ಭೂ ಮಾಲಕರ ವಿರುದ್ಧ ನಡೆದ ಹೋರಾಟಗಳಾಗಿದ್ದವು

ಬಲಾತ್ಕಾರವಾಗಿ ಭೂಮಿಯನ್ನು ಹಿಡಿಯುವುದು ಸತತವಾಗಿ ಎಡೆಬಿಡದೆ ನಡೆಯುವ ಹೋರಾಟವಾಗಿತ್ತು.

ಈ ಅಭ್ಯಾಸದ ವರದಿಯ ಪ್ರಕಾರ 'ಅಸ್ಥಿರತೆ ಮತ್ತು ಅತೃಪ್ತಿ ಘೋಷಣೆ ತೀವ್ರಗೊಳ್ಳುವ ದಿಕ್ಕಿನಲ್ಲಿ ಬೆಳೆಯುತ್ತಿದೆ" ಎಂದು ಅಭಿಪ್ರಾಯಪಟ್ಟಿತ್ತು. ಈ ಪರಿಸ್ಥಿತಿ ಇನ್ನು ಬಿಗಡಾಯಿಸುವುದಕ್ಕೆ ಕಾರಣ "ಸ್ವಾತಂತ್ರ್ಯ ಸಿಕ್ಕಿದ ಆರಂಭದಲ್ಲಿ ಭೂಸುಧಾರಣೆಯ ಬಗ್ಗೆ ಇದ್ದ ಉತ್ಸಾಹವು ಸಂಪೂರ್ಣವಾಗಿ ಭೂ ಸುಧಾರಣೆ ಕಾಯಿದೆ ನಿಲ್ಲುವುದರೊಂದಿಗೆ ಕುಂದಿಹೋಗಿತ್ತು."

ವರದಿಯು ಸರಕಾರಕ್ಕೆ ಎಚ್ಚರಿಕೆ ಕೊಟ್ಟು "ಈ ಸಮಸ್ಯೆಯನ್ನು ವಿಸ್ತೃತವಾಗಿ ಮತ್ತು ಪರಿಣಾಮಕಾರಿಯಾಗಿ ಬಗೆಹರಿಸುವುದು ಅವಶ್ಯಕವೆಂದು" ಸಾರಿತ್ತು. "ಈ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ವಿಫಲರಾದರೆ ಅತೃಪ್ತಿಗೊಂಡ ಜನಸಮೂಹಗಳು ಸಂಘಟನೆಯಾಗಿ ಗ್ರಾಮಾಂತರ ಪ್ರದೇಶಗಳ ತೀವ್ರ ಬಿಗುಮಾನದ ಪರಿಸ್ಥಿತಿಯಲ್ಲಿ ಒಂದು ಕ್ಲಿಷ್ಟ ಅಣುವಾಗಿ ಪರಿವರ್ತನೆಗೊಂಡು ಭಾರತೀಯ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಫೋಟನೆಗೆ ಕಾರಣೀಭೂತವಾಗಬಹುದೆಂದು" ಎಚ್ಚರಿಕೆ ಕೊಟ್ಟಿತ್ತು.

ರಾಜ್ಯ ಮುಖ್ಯ ಮಂತ್ರಿಗಳ ಸಮಾವೇಶವು ನವೆಂಬರ್ 1967 ಮತ್ತು 1970 ಸೆಪ್ಟೆಂಬರ್‌ದಲ್ಲಿ ಕೃಷಿಕ ಬಿಕ್ಕಟ್ಟನ್ನು ಕುರಿತು ಚರ್ಚಿಸಲು ಸಭೆ ಸೇರಿತ್ತು.

ಸೆಪ್ಟೆಂಬರ್ 26, 19:0ರಲ್ಲಿ "ನಮಗೆ ಸಿಕ್ಕಿದ ವರದಿ ಪ್ರಕಾರ ಇಂತಹ ಪ್ರದೇಶದಲ್ಲಿ ಅತ್ಯಂತ ಬಿಗುಮಾನದ ವಾತಾವರಣವಿದೆ. ಬಲಾತ್ಕಾರವಾಗಿ ಭೂ ಆಕ್ರಮಣವಾಗುವ ಸ್ಥಿತಿಗತಿ ಕಾಣುತ್ತಿದೆ ಭವಿಷ್ಯದ ಮೇಲೆ ಇದು ತಪ್ಪು ನೆರಳನ್ನು ಚಾಚುತ್ತಿದೆ ಇದನ್ನು ನಾವು ಕಡೆಗಣಿಸುವಂತಿಲ್ಲ" ಎಂದು ಎಚ್ಚರಿಸಿದ್ದರು.

ರಾಷ್ಟ್ರೀಯ ಪಕ್ಷಗಳು ಇದನ್ನು ಸಂಘಟಿಸಬಹುದು ಆದರೆ ಅವು ಅದನ್ನು ಸೃಷ್ಟಿಸುವುದಿಲ್ಲ"

ಅದಕಾರಣ ಪರಿಸ್ಥಿತಿಯನ್ನು ಎದುರಿಸುವ ಕಾಲ ಸನ್ನಿಹಿತವಾಗಿದೆ.

ಆದರೆ ಭೂಪರಿಮಿತಿಯ ಕುರಿತು ಒಂದು ತೀರ್ಮಾನಕ್ಕೆ ಬರಲು ರಾಜ್ಯಗಳ ಮುಖ್ಯ ಮಂತ್ರಿಗಳು ತಯಾರಿರಲಿಲ್ಲ.

ಅದರಲ್ಲಿ ಒಂದು ಸಮಿತಿಯು ರಚಿಸಲ್ಪಟ್ಟಿತು. ಈ ಸಮಿತಿಯು ಆಗಸ್ಟ್ 3, 1971ರ ಕೆಲವು ಮುಖ[illegible]ನ್ನು ಮಾಡಿ "ಭೂ ಕಾನೂನುಗಳಿಗೆ ಕೆಲವು ನಿರ್ದೇಶನ ತತ್ವಗಳ ಸಲಹೆ ಮಾಡಿತು."

[illegible]ಂದಿಯ ಒಂದು ಕ[illegible]ಟುಂಬಕ್ಕೆ ಎರಡು ಬೆಳೆಯ 10ರಿಂದ [illegible] ಎಕರೆ ನೀರಾವರಿ ಭೂಮಿಯ ಪರಿಮಿತಿಯನ್ನು ಅದು ಸೂಚಿಸಿತು. ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಪ್ರಾಯಬಾರದ ಮಕ್ಕಳು ಎರಡು ಕುಟುಂಬದಷ್ಟು ಗರಿಷ್ಟ ಪರಿಮಿತಿ ಎಂಬುದು ಈ ಸಮಿತಿ ಶಿಫಾರಸುಗಳು

ಪುನಃ ಕಾಂಗ್ರೆಸ್ ಅಧ್ಯಕ್ಷರುಗಳು, ಸಚಿವರುಗಳು ಮತ್ತು ಮುಖ್ಯ ಮಂತ್ರಿಗಳು ಒಂಬತ್ತು ಮಂದಿಯ ಸಮಿತಿಯನ್ನು ರಚಿಸಿ ಮೋಹನ್ ಕುಮಾರ್ ಮಂಗಲಂ ಇವರನ್ನು ಅಧ್ಯಕ್ಷರನ್ನಾಗಿ ಮಾಡಿತು ಮೇ 29, 1972ರಲ್ಲಿ. ಅದು ಜೂನ್ 1972ರಲ್ಲಿ ಒಂದು ವರದಿಯನ್ನು ಸಮರ್ಪಿಸಿತು.

ಈ ವಿಷಯದಲ್ಲಿ ಕಾಂಗ್ರೆಸ್ ವಿಭಿನ್ನ ಅಭಿಪ್ರಾಯ ತಳೆಯಿತು

ಭೂ ಪರಿಮಿತಿ ಕಾನೂನು ಯಾವೊಂದು ತಡೆಯಿಲ್ಲದೆ ಮುಂದುವರಿಯಿತು

ಈಗ ಚಾಲಿಯಲ್ಲಿರುವ ಭೂಪರಿಮಿತಿ ಕಾನೂನುಗಳನ್ನು ಜಾರಿಗೆ ತಂದರೂ ಗಣನೀಯ ಪ್ರಮಾಣದಲ್ಲಿ ಭೂಮಿ ಹಂಚುವುದಕ್ಕೆ ಹೋರಿಯಾಗುತ್ತಿತ್ತು.

ಆದರೆ ಬಂಡವಾಳಶಾಹಿ-ಭೂಮಾಲಿಕ ಸರಕಾರವು ಎಲ್ಲಾ ಕಾನೂನುಗಳನ್ನು ಜಾರಿ ಮಾಡುವುದನ್ನು ಮುಂದಕ್ಕೆ ಹಾಕುತ್ತಾ ಬಂದಿದೆ.

"ಟಾಸ್ಕ್ ಫೋರ್ಸ್" ಸಮಿತಿಯು ಈ ಪರಿಸ್ಥಿತಿಗೆ ಮುಖ್ಯವಾಗಿ ರಾಷ್ಟ್ರೀಯ ದೃಢತೆಯ ಕೊರತೆಯೇ ಕಾರಣವೆಂದು ಬೊಟ್ಟುಮಾಡಿ ತೋರಿಸಿತ್ತು. ಅದು ಕೊಟ್ಟ ಇತರ ಕಾರಣಗಳು: ಅಸಮರ್ಪಕ ಭೂ-ಧೋರಣೆ, ಕಾನೂನು ಅಡ್ಡಿ ಮತ್ತು ಸರಿಯಾದ ಭೂ-ರಿಕಾರ್ಡು ಇಲ್ಲದಿರುವುದಾಗಿತ್ತು.

ಇದು ಸ್ಪಷ್ಟವಾಗಿ 1947ರ ನಂತರ ಅಧಿಕಾರಕ್ಕೆ ಬಂದ ಬಂಡವಾಳಶಾಹಿ – ಭೂಮಾಲಿಕ ಸರಕಾರಗಳ "ದ್ವಿಮುಖ" ಧೋರಣೆಯನ್ನು ತೋರಿಸುತ್ತದೆ.

ಗ್ರಾಮಾಂತರ ಪ್ರದೇಶಗಳ ಬಡ ಜನರನ್ನು ತಮ್ಮ ಕಡೆಗೆ ಒಲಿಸುವ ಸಲುವಾಗಿ ಕಾಂಗ್ರೆಸ್ ಪಕ್ಷವು ಒಂದೆಡೆ ತೀವ್ರ ಭೂ ಸುಧಾರಣೆ ಕಾನೂನುಗಳಿಗಾಗಿ ಘೋಷಣೆಯನ್ನು ಸೃಷ್ಟಿಮಾಡುತ್ತಾ ಬಂದಿದೆ ; ಇನ್ನೊಂದು ಪ್ರಶ್ನೆಗಳಲ್ಲಿ ಭೂಮಾಲೀಕರ ಒಡೆತನದ ಹಿತಗಳ ಪ್ರಶ್ನೆ ಬಂದಾಗ ಅದು ದೊಡ್ಡ ಮತ್ತು ಪ್ರಬಲ ಭೂಮಾಲಿಕ ರಕ್ಷಣೆ ಮಾಡುವುದರಲ್ಲಿ ಅವರ ಕಡೆ ವಹಿಸುತ್ತಾ ಬಂದಿದೆ.

ಗ್ರಾಮಾಂತರದಲ್ಲಿರುವ ರಾಜಕೀಯ ಅಧಿಕಾರ ರಚನೆಯ ಸ್ವಭಾವವನ್ನು ಪರಿಶೀಲಿಸಿದರೆ ಅವಶ್ಯಕವಾದ ರಾಜಕೀಯ ದೃಢತೆಯು ಮುಂದೆ ಬಾರದಿರುವುದು ಸ್ವಾಭಾವಿಕ.

ಇನ್ನೊಂದು ಮುಖ್ಯ ಕಾರಣ: ಭೂಸುಧಾರಣೆಗಳನ್ನು ಜಾರಿ ಮಾಡುವ ಆಡಳಿತ ಯಂತ್ರದಲ್ಲಿರುವ ದೋಷ. ಅದರ ದೃಷ್ಟಿ [illegible]ನ ಮತ್ತು ಉತ್ಸಾಹರಹಿತ, ಇದು ಅನಿವಾರ್ಯ. ಆಡಳಿತವು ದೊಡ್ಡ ಭೂಮಾಲಿಕರೊಡನೆ ನೇರ ಸಂಬಂಧವುಳ್ಳದಾಗಿರುವುದೇ ಇದಕ್ಕೆ ಕಾರಣ

ಭೂ ಸುಧಾರಣೆಗಳ ಜಾರಿಗೆ ಕೋರ್ಟುಗಳು ಒಂದು ದೊಡ್ಡ ಅಡಚಣೆ. ಭೂ ವಿತರಣೆಗೆ ಯಾವುದೇ ಅಲ್ಪಸ್ವಲ್ಪ ಅವಕಾಶವಿದ್ದುದೂ ಕಾನೂನುಗಳಲ್ಲಿ ತುಂಬಿರುವ ಬಿರುಕುಗಳಿಂದಾಗಿ ಮಾಯವಾಯಿತು.

ಒಂದು ತರ್ಕಬದ್ಧ ತೀರ್ಮಾನಕ್ಕಂತೂ ಖಂಡಿತವಾಗಿ ಬರಬಹುದು. ಆಳುವ ವರ್ಗಗಳು ಸರಕಾರದ ಮೂರು ಭಾಗಗಳ ಮೂಲಕ ಅಂದರೆ ಕಾರ್ಯಾಂಗ ನ್ಯಾಯಾಂಗ ಮತ್ತು ಕಾನೂನು ರಚನಾಂಗಗಳ ಮೂಲಕ ಆಸ್ತಿ ಸಂಬಂಧಗಳಿಗೆ ಎಲ್ಲಾ ಸಾಮಾಜಿಕ ಸುಧಾರಣೆಗಳನ್ನು ಯಶಸ್ವಿಯಾಗಿ ಅಡ್ಡಿಮಾಡುತ್ತಾ ಬಂದಿವೆ.

ಬಡವರಿಗೆ ವಿರುದ್ಧವಾಗಿರುವ ಈಗಿನ ನ್ಯಾಯಪದ್ಧತಿಯು ರಿಕಾರ್ಡುಗಳು ಇಲ್ಲದಿರುವುದರಿಂದ ಭೂಮಾಲಿಕರಿಂದ ಸಂಪೂರ್ಣವಾಗಿ ಉಪಯೋಗಿಸಲ್ಪಡುತ್ತಾ ಬಂದಿದೆ. ಭೂಮಿಯನ್ನು ಸ್ವತಃ ಉಳುತ್ತಾ ಬಂದ ಲಕ್ಷಾಂತರ ಗೇಣಿದಾರರನ್ನು ದೊಡ್ಡ ಪ್ರಮಾಣದಲ್ಲಿ ಭೂಮಿಯಿಂದ ಉಚ್ಚಾಟನೆ ಮಾಡಲು ಭೂಮಾಲಿಕರಿಗೆ ಈ ನ್ಯಾಯಪದ್ಧತಿ ಅನುಕೂಲಮಾಡಿಕೊಟ್ಟಿದೆ. ಅದಕಾರಣ, ಕೋರ್ಟಿನಿಂದ ಯಾವ ಕಾನೂನು ಗೇಣಿದಾರ ರೈತರಿಗೆ ಸಹಾಯವಾಗಿಲ್ಲ.

ಹೀಗಿದ್ದಾಗ್ಯೂ ರೈತರ ಹೆಸರಿನಲ್ಲಿ ಭೂ-ರಿಕಾರ್ಡುಗಳನ್ನು ಹೊಸದಾಗಿ ತಯಾರಿಸಲು ಯಾವುದೇ ಕ್ರಮಗಳನ್ನು ಕಾಂಗ್ರೆಸ್ಸು ಸರಕಾರಗಳು ವಹಿಸಲಿಲ್ಲ

"ಟಾಸ್ಕ್ ಫೋರ್ಸ್" ರೈತರ ಚೌಕಾಶಿ ಶಕ್ತಿಯನ್ನು ತಡೆಹಿಡಿಯುವ ಶಕ್ತಿಯನ್ನು ವೃದ್ಧಿ ಮಾಡುವುದರಲ್ಲಿ ರೈತರ ಸಮಸ್ಯೆಗಳು ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟಿದೆ.

ಆದರೆ ಪ್ರಾಯೋಗಿಕವಾಗಿ ಸರಕಾರದ ಧೋರಣೆಯು ಎಲ್ಲಾ ಸಮರಧೀರ ರೈತರ ಸಂಘಟನೆಗಳನ್ನು ಅನಾಗರಿಕ ದಬ್ಬಾಳಿಕೆ ಮೂಲಕ ಹತ್ತಿಕ್ಕುವ ಧೋರಣೆಯಾಗಿದೆ. ಭೂ ಮಾಲಕರಿಂದ ಭೂ ಬಿಟ್ಟು ದಬ್ಬಾಳಿಕೆಗೆ ಸರಕಾರದ ಸಶಸ್ತ್ರ ಬಲವು ಸಹಾಯಕವಾಗಿ ನಿಂತಿದೆ.

ಹೀಗಿದ್ದರೂ ಆಳುವ ವರ್ಗಗಳ ದಬ್ಬಾಳಿಕೆಯನ್ನು ಹೋರಾಟದ ಮೂಲಕ ಯಶಸ್ವಿಯಾಗಿ ಎದುರಿಸಿ ನಿರ್ದಿಷ್ಟ ವಿಜಯಗಳನ್ನು ಕಾರ್ಮಿಕ ವರ್ಗ ಮತ್ತು ರೈತ ವರ್ಗ ಸಾಧಿಸಿದೆ.

5ನೇ ಯೋಜನೆಯಲ್ಲಿ ಭೂ ಸುಧಾರಣೆಗಳ ಅವಶ್ಯಕತೆಯನ್ನು ನಿರೂಪಿಸುವಂತೆ ಅವು ಒತ್ತಾಯ ತಂದಿದೆ.

ಭೂ ಸುಧಾರಣಾ ಕಾನೂನುಗಳ ಜಾರಿ

ರಾಜ್ಯ	ಭೂಪರಿಮಿತಿ (ಎಕರೆಯಲ್ಲಿ)	ಭೂಪರಿಮಿತಿಗಿಂತ ಹೆಚ್ಚಿನ ಭೂಮಿ ಸರ್ಕಾರ ಕೈವಶಮಾಡಿದ್ದು (ಸಾವಿರ ಎಕರೆಗಳಲ್ಲಿ)	ನೀಟಾಗಿ ಜಾರಿಗೊಳಿಸಿದ್ದು
ಆಂಧ್ರಪ್ರದೇಶ	27ರಿಂದ 324ರವರೆಗೆ	74	ಇಲ್ಲ
ಅಸ್ಸಾಂ	50	68	ಇಲ್ಲ
ಬಿಹಾರ	20ರಿಂದ 60	ಇಲ್ಲ	ಇಲ್ಲ
ಗುಜರಾತ್	19ರಿಂದ 132	50	25
ಹರಿಯಾಣ	2[illegible]ರಿಂದ 100	170	65
ಜಮ್ಮು ಮತ್ತು ಕಾಶ್ಮೀರ	223/4	450	45
ಕರ್ನಾಟಕ	27ರಿಂದ 216	ಇಲ್ಲ	ಇಲ್ಲ
ಕೇರಳ	6ರಿಂದ 20	10	1.8
ಮಧ್ಯಪ್ರದೇಶ	25ರಿಂದ 75	84	13
ಮಹಾರಾಷ್ಟ್ರ	18ರಿಂದ 126	271	123
ಒರಿಸ್ಸಾ	25ರಿಂದ 100	ಇಲ್ಲ	ಇಲ್ಲ
ಪಂಜಾಬ್	27ರಿಂದ 100	178	64
ರಾಜಸ್ಥಾನ್	22ರಿಂದ 333	ಇಲ್ಲ	ಇಲ್ಲ
ತಮಿಳುನಾಡು	24ರಿಂದ 120	25	17
ಉತ್ತರ ಪ್ರದೇಶ	40ರಿಂದ 80	241	121
ಪಶ್ಚಿಮಬಂಗಾಳ	12.4ರಿಂದ 17.3	698	375
ಒಟ್ಟು		2315	1255 8

ಟಾಸ್ಕ್ ಫೋರ್ಸ್ ಭೂ ಸಂಬಂಧಗಳ ವಿಷಯದಲ್ಲಿ 1974ರಲ್ಲಿ ವರದಿಯಾಗಿತ್ತು.

ಈ ಅಧಿಕ ಭೂ ಪರಿಮಿತಿಯಲ್ಲದೆ ಹಲವಾರು ಅಪವಾದಗಳನ್ನು ಮಾಡಿ ಹಲವು ತರದ ಭೂಮಿಗೆ ಇದು ಲಗತ್ತಾಗದ ಹಾಗೆ ಮಾಡಲಾಗಿದೆ.

ಕಾಫಿ, ಚಹ, ರಬ್ಬರ್ ಇತ್ಯಾದಿ ತೋಟಗಳಿಗೆ ರಿಯಾಯಿತಿ ಕೊಡಲಾಗಿದೆ. ಕಬ್ಬಿನ ತೋಟಗಳನ್ನು ಸಕ್ಕರೆ ಕಾರ್ಖಾನೆಗಳು ನಿಯಂತ್ರಿಸಿದರೆ ರಿಯಾಯಿತಿ ಕೊಡಲಾಗಿದೆ. ಹಣ್ಣಿನ ತೋಟಗಳು, ವಿಶೇಷವಾಗಿ ನೆಡುಮಾಡುವ ತೋಟಗಳಿಗೆ ರಿಯಾಯಿತಿ ಕೊಡಲಾಗಿದೆ. ಅಲ್ಲದೆ ದಾನ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು ನಡೆಸುವಂತ ತೋಟಗಳಿಗೆ ರಿಯಾಯಿತಿ ಕೊಡಲಾಗಿದೆ. ಕೋ ಆಪರೇಟಿವ್ ಫಿಂಗ್ ನಡೆಸುವ ಹೊಲಗಳು ರಿಯಾಯಿತಿಗೊಳಗಾಗಿವೆ.

ಈ ಎಲ್ಲಾ ರಿಯಾಯಿತಿಗಳ ಉಪಯೋಗ ಪಡೆದು ದೊಡ್ಡ ಭೂಮಾಲಿಕರು ದೇಶದಾದ್ಯಂತ ಭೂ ಕಾನೂನುಗಳಿಂದ ತಪ್ಪಿಸಿಕೊಂಡು ಅಪಾರ ಪ್ರಮಾಣದಲ್ಲಿ ಭೂಮಿಯನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ.

ಭೂ ಪರಿಮಿತಿ ಕಾನೂನುಗಳಿಂದ ತಪ್ಪಿಸಿಕೊಳ್ಳುವುದು ದೇಶದಾದ್ಯಂತವಾಗಿರುವ ಪಿಡುಗು.

"ಆಳುವ ವರ್ಗಗಳು ಭೂ ಪರಿಮಿತಿ ಕಾನೂನುಗಳನ್ನು ಜಾರಿ ಮಾಡಿ ತಮ್ಮ ಆತ್ಮಹತ್ಯೆ ಮಾಡಿಕೊಳ್ಳುವುದೆಂದು ಅಪೇಕ್ಷಿಸುವುದು ಮೂಢತನವಲ್ಲದೆ ಬೇರೇನು" ಎಂದು ಒಂದು ರಾಷ್ಟ್ರೀಯ ಪತ್ರಿಕೆಯು ಸರಿಯಾಗಿಯೇ ಪ್ರಶ್ನಿಸಿದೆ.

ಅದ ಕಾರಣ, ದೇಶದಲ್ಲಿ "ಈಗಿರುವ ಭೂ ಪರಿಮಿತಿಯನ್ನು ಯಥಾರ್ಥವಾಗಿ ನ್ಯಾಯಬದ್ಧವಾಗಿ ಕಡಿಮೆಗೊಳಿಸಿ, ಕಠಿಣವಾಗಿ ಜಾರಿ ಮಾಡಿ ಮಿಲಿಯಾಂತರ ಎಕರೆ ಭೂಮಿಯನ್ನು ಭೂರಹಿತರಿಗೂ, ಬಡ ರೈತರಿಗೂ ಹಂಚುವ ಕೆಲಸ, ಆ ಮೂಲಕ ಅಪಾರ ಕಾರ್ಮಿಕ ಶಕ್ತಿ ಬಿಡುಗಡೆಯಾಗಿ ಒಟ್ಟಿನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಕರ್ತವ್ಯವು" ಪ್ರೌಢಸಲ್ಪಡುವ ರಾಜಕೀಯ ಶಕ್ತಿಗಳ ವರ್ಗ ಬಲಾಬಲದಲ್ಲಿ ಬದಲಾವಣೆಯು ದೇಶದಲ್ಲಿ ಆಗಬೇಕಾಗಿದೆ.

ಈಗಿರುವ ರಾಜಕೀಯ ಅಧಿಕಾರದ ಸ್ಥಾನದಲ್ಲಿ ಜನ ಪ್ರಜಾಪ್ರಭುತ್ವ ರಂಗ ಕೂಟವನ್ನು ರಚಿಸುವ ಮೂಲಕ ಮಾತ್ರ - ಕಾರ್ಮಿಕ ವರ್ಗದ

(6ನೇ ಪುಟ ನೋಡಿ)

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ಜಿಲ್ಲಾ ಘಟಕದಿಂದ

ಅಂತರ್ರಾಷ್ಟ್ರೀಯ ದುಡಿಯುವ ಮಹಿಳೆಯರ ದಿನಾಚರಣೆ

ದಿನಾಂಕ 15-3-86 ರಂದು ಅ. ಭಾ. ಪ್ರ. ಮಹಿಳಾ ಸಂಘಟನೆಯು "ಅಂತರ್ರಾಷ್ಟ್ರೀಯದುಡಿಯುವ ಮಹಿಳೆಯರ ದಿನಾಚರಣೆ"ಯನ್ನು ಆಚರಿಸಿತು ಮೊದಲಿಗೆ ಶ್ರೀಮತಿ ಸುಲೋಚನಾ ಸಂಘಿ ಅವರು ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಶ್ರೀಮತಿ ಕಮಲಾಬಾಳಿಯವರು "ಅಂತರ್ರಾಷ್ಟ್ರೀಯ ದುಡಿಯುವ ಮಹಿಳೆಯ ದಿನಾಚರಣೆಯ ಮಹತ್ವದ ಬಗ್ಗೆ ತಿಳಿಸಿದರು. ಈ ದಿನದ ಅಂಗವಾಗಿ, ಪ್ರಥಮ ಜಿಲ್ಲಾ ಸಮಾವೇಶದ ನೆನಪಿಗಾಗಿ, ಹೊರತಂದ ಸ್ಮರಣ ಸಂಚಿಕೆಯನ್ನು ಶ್ರೀಮತಿ ಕರುಣಾ ಕುಲಕರ್ಣಿಯವರು ಬಿಡುಗಡೆ ಮಾಡಿದರು.

"ಮೂಲಭೂತವಾದ ಮತ್ತು ಮಹಿಳೆ" ಎಂಬ ವಿಚಾರ ಸಂಕಿರಣವನ್ನು ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿತ್ತು

ಮೊದಲ ಭಾಷಣಕಾರರಾದ ಶ್ರೀ ಮಹಮ್ಮದ್ ಫಸಲುಲ್ಲಾ, ವಕೀಲರು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾ, ಶರಿಯತ್ ಆಧಾರಿತ ಮುಸ್ಲಿಂ ವ್ಯಕ್ತಿ ಕಾನೂನು ಧರ್ಮಗ್ರಂಥವಾದ ಖುರಾನಿನ ಬೋಧನೆಯಾಗಿದ್ದು ಈ ದೈವ ವಾಣಿಯನ್ನು ಯಕಃಶ್ಚಿತ ಮಾನವ ಪ್ರಾಣಿಗಳಾದ ನಾವು ಯಾವುದೇ ರೀತಿ ಬದಲಾಯಿಸಲು ಶಕ್ಯರಲ್ಲ ಎಂದು ಹೇಳಿ ಪ್ರಧಾನಿ ರಾಜೀವ ಗಾಂಧಿಯವರು ರಾಜ್ಯಸಭೆಯಲ್ಲಿ ಮಂಡಿಸಿರುವ ಬಿಲ್ಲು ಶರಿಯತ್‌ನ ಹೇಳಿಕೆಗೆ ಪೂರಕವಾಗಿದ್ದುದರಿಂದ, ಅದನ್ನು ತಾವು ಸ್ವಾಗತಿಸುವುದಾಗಿ ಹೇಳಿದರು

ನಂತರ ಖ್ಯಾತ ವಕೀಲರಾದ ಕಾ| ಡಿ. ಸುರೇಶ ಅವರು ಮಾತನಾಡುತ್ತ ಬಹಳಷ್ಟು ಸಮಯಗಳು ಕಾನೂನು ತಪ್ಪಿಗಿದ್ದು, ಈ ಪ್ರಕರಣದಲ್ಲಿ ಮುಖ್ಯವಾಗಿ ಮಾನವೀಯ ದೃಷ್ಟಿಕೋನದಲ್ಲಿ ಮಹಿಳೆಗೆ ನ್ಯಾಯ ಸಿಕ್ಕಿ ಯಾವುದೇ ರಾಜಕೀಯ ಹಿತಾಸಕ್ತಿಗಾಗಿ ಈ ಪ್ರಕರಣವನ್ನು ಉಪಯೋಗಿಸಿಕೊಳ್ಳದೆ ಈಗ ಇಟ್ಟಂಥ ಬಿಲ್ಲು ವಾಪಸಾಗಿ ಸುಪ್ರೀಂಕೋರ್ಟಿನ ತೀರ್ಪು ಒಪ್ಪಿಕೊಳ್ಳಬೇಕೆಂಬ ಆಶಯ ವ್ಯಕ್ತಪಡಿಸಿದರು. ಮೂರನೆಯ ಭಾಷಣಕಾರರಾದ ಶ್ಯಾಮಲಾ ಪೂಜಾರ್ ಅವರು (ಸಂಘಟನೆಯ ಜಿಲ್ಲಾಧ್ಯಕ್ಷೆ) ಮಾತನಾಡುತ್ತಾ, ಶತಮಾನಗಳಿಂದ ಧರ್ಮ – ಕಾನೂನುಗಳಡಿಯಲ್ಲಿ ನರಳುತ್ತ ಸತ್ತು ಹೋದವರ ದನಿಗಳನ್ನೆಲ್ಲಾ ಒಗ್ಗೂಡಿಸಿಕೊಂಡ ಪ್ರಜಾಸತ್ತಾತ್ಮಕ ಕೂಗಾಗಿದೆ. ಇಲ್ಲಿ ಕೇವಲ ಮಹಿಳೆಯ ಹಕ್ಕಿಗಾಗಿ ನ್ಯಾಯ ದೊರಕಿಸುವುದಷ್ಟೇ ಅಲ್ಲ, ಜೊತೆಗೆ ದೇಶದ ಐಕ್ಯತೆ ಮತ್ತು ಭದ್ರತೆಯನ್ನು ಕಾಪಾಡುವ ಹೊಣೆಯೂ ಸಂಘಟನೆಯದಾಗಿರುತ್ತದೆ ಓಟಿನ ಪೆಟಿಯನ್ನೇ ಮೂಲವಾಗಿಟ್ಟುಕೊಂಡು ತನ್ನ ದಿವಾಳಿಖೋರ ನೀತಿಗಳಿಂದಾಗಿ, ಕೇಂದ್ರದ ಜನವಿರೋಧಿ ಕಾಂಗ್ರೆಸ್ (ಐ) ನೇತೃತ್ವದ ಪ್ರಭುತ್ವವು ಮೂಲಭೂತವಾದಿಗಳಿಗೆ ಕುಮ್ಮಕ್ಕು ನೀಡುವ ನೀತಿಯನ್ನು ಕೈಬಿಡಬೇಕು ಎಂದರು

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಕಾ|| ರಾಘವೇಂದ್ರ ಕುಷ್ಟಗಿಯವರು, ಧರ್ಮ ಗ್ರಂಥಗಳನ್ನು ದೇವ – ವಾಣಿಯೆಂದು ಹೇಳಿ, ಯಾವ ಬದಲಾವಣೆಗೂ ಕೈಹಾಕಬಾರದೆಂಬ ಮೂಲಭೂತವಾದಿಗಳ ನಿಲುವನ್ನು ಟೀಕಿಸುತ್ತ ಮೂರು ತಿಂಗಳ ಕೂಸಿಗೆ ಹಾಕಿದ ಅಂಗಿ-ಚಡ್ಡಿಗಳು, ಇಪ್ಪತ್ಮೂರು ವರ್ಷದ ತರುಣನಿಗೆ ಹಾಕಿದರೆ, ಅದು ಹೇಗೆ ಅವನ ಮೈಯನ್ನು ಬೆತ್ತಲೆಗೊಳಿಸುವುದೋ ಅದರಂತೆಯೇ ಎಷ್ಟೋ ವರ್ಷಗಳ ಹಿಂದೆ, ಭ್ರೂಣಾವಸ್ಥೆಯ ಸಮಾಜದ ಪರಿಸ್ಥಿತಿಗಳಲ್ಲಿ ರಚಿತವಾದ ಈ ಕಾನೂನುಗಳನ್ನು ಇಪ್ಪತ್ತೊಂದನೇ ಶತಮಾನಕ್ಕೆ ಅಡಿಯಿಡುತ್ತಿರುವ, ಇಂದಿನ ಸಮಾಜದ ಪರಿಸ್ಥಿತಿಗನುಗುಣವಾಗಿ ಬದಲಾಯಿಸದೇ ಇದ್ದರೆ ಸರಿಯೇ ಎಂದು ಮೂಲಭೂತವಾದಿಗಳಿಗೆ ಪ್ರಶ್ನಿಸಿದರು. ಯಾವುದೇ ಕ್ರಿಯೆಗೆ ಮಾನವೀಯತೆಯೇ ತಳಹದಿಯಾಗಬೇಕೇ ಹೊರತು ಶೋಷಣೆಯಲ್ಲವೆಂದು ಸ್ಪಷ್ಟೀಕರಿಸಿದ ಅವರು ಈ ದಿಶೆಯಲ್ಲಿ ಕಾ|| ಡಿ. ಸುರೇಶ, ವಕೀಲರು ಮತ್ತು ಶ್ರೀಮತಿ ಶಾಮಲಾ ಪೂಜಾರರವರ ಅಭಿಪ್ರಾಯಗಳನ್ನು ಬೆಂಬಲಿಸಿ "ಸಮಾನ ಸಿವಿಲ್ ಕೋಡಿಗಾಗಿ" ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳೂ, ವ್ಯಕ್ತಿಗಳೂ ಧ್ವನಿಗೂಡಿಸಬೇಕೆಂದು ಹೇಳಿದರು

ಕೊನೆಯಲ್ಲಿ ಶ್ರೀಮತಿ ಶಿವಕುಮಾರಿಯವರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

ಪಂಜಾಬನ್ನು ರಕ್ಷಿಸಿ – ದೇಶ ಉಳಿಸಿ

[3ನೇ ಪುಟದಿಂದ]

ಒಪ್ಪಂದವನ್ನು ಪೂರ್ಣವಾಗಿ ಅನುಷ್ಠಾನಕ್ಕೆ ತರುವ ಮೂಲಕ ಪಂಜಾಬ್ ಸರ್ಕಾರಕ್ಕೆ ಉಗ್ರಗಾಮಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲು ನೆರವು ನೀಡಬೇಕು ಅಕಾಲಿ ಪಕ್ಷವೂ ಅಕಾಲಿ ಚಳುವಳಿಯ ಉನ್ನತ ಪರಂಪರೆಗನುಗುಣವಾಗಿ ಕೋಮುವಾರು ಸೌಹಾರ್ದ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಿಕೊಳ್ಳುವುದೇ ತನ್ನ ಮುಖ್ಯ ಕರ್ತವ್ಯವೆಂಬುದನ್ನು ತಿಳಿಯಬೇಕು. ಗುರುದ್ವಾರ ಸುಧಾರಣ ಚಳುವಳಿಯ ಯಶಸ್ಸಿನ ನಂತರ ಇನ್ನೂ ದೊಡ್ಡದಾದ ಭಾರತದೇಶವೆಂಬ ಗುರುದ್ವಾರವನ್ನು ವಿಮೋಚನೆಗೊಳಿಸುವುದೇ ತಮ್ಮ ಉದ್ದೇಶವಾಗಿತ್ತೆನ್ನುವುದನ್ನು ಅಕಾಲಿಗಳಿಗೆ ನೆನಪಿಸಿ ಕೊಡಬೇಕೆ? ಭಾರತೀಯ ಜನತೆಯ ವಿಮೋಚನೆಯ ಕಾರ್ಯಕ್ಕೆ ಇಂದು ಉಗ್ರಗಾಮಿಗಳು ಮತ್ತು ಅವರ ಸಾಮ್ರಾಜ್ಯಶಾಹಿ ಧನಿಗಳಿಂದ ಅಪಾರ ಹಾನಿಯಾಗುತ್ತಿದೆ. ಜಲಿಯನ್‌ವಾಲಾ ಬಾಗ್‌ನ ಹುತಾತ್ಮರು, ಗದ್ದರ್ ಚಳುವಳಿಯ ಧೀರರು ಅಕಾಲಿಗಳು, ಬಬ್ಬರ್ ಅಕಾಲಿಗಳು ಮತ್ತು ಭಗತ್‌ಸಿಂಗ್ ಹಾಗೂ ಆತನ ಸಂಗಾತಿಗಳಂತಹ ಹುತಾತ್ಮರ ಉನ್ನತ ಪರಂಪರೆಯುಳ್ಳ ಪಂಜಾಬಿನ ಜನತೆ ಇಂದು ದೇಶದ ಐಕ್ಯತೆಯನ್ನು ಉಳಿಸುವ ಮತ್ತು ದೇಶದಲ್ಲಿ ಅಸ್ಥಿರತೆಯುಂಟುಮಾಡಲು ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಸೋಲಿಸುವ ಹೊಣೆಗಾರಿಕೆಯನ್ನು ನಿರ್ವಹಿಸಲೇಬೇಕಾಗಿದೆ. ●

(5ನೇ ಪುಟದಿಂದ)

ನೇತೃತ್ವದಲ್ಲಿ, ಕಾರ್ಮಿಕ ವರ್ಗಗಳ ಮತ್ತು ರೈತ ವರ್ಗಗಳ ಐಕ್ಯತೆಯ ಆಧಾರದಲ್ಲಿ, ಮಧ್ಯಮ ವಿಭಾಗಗಳ ಮತ್ತು ರಾಷ್ಟ್ರೀಯ ಬಂಡವಾಳ ವರ್ಗದ ಸಂಯುಕ್ತ ಜನತಾ ಪ್ರಜಾಪ್ರಭುತ್ವ ರಂಗದ ಆಧಾರದ ಮೂಲಕ ಮಾತ್ರ ಈ ರಾಜಕೀಯ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯ.

ಅಂತಹ ಅಧಿಕಾರ ಕೂಟಕ್ಕೆ ಮಾತ್ರ "ಟಾಸ್ಕ್‌ಫೋರ್ಸ್" ಉಲ್ಲೇಖಿಸಿದ "ರಾಜಕೀಯ ದೃಢತೆ" ಮೈಗೂಡಲು ಸಾಧ್ಯ.

ಭೂ ಪ್ರಶ್ನೆ ಈ ರಾಜಕೀಯ ಬಲಾಬಲ ವ್ಯತ್ಯಸ್ತವಾಗುವ ತನಕ ಕೇವಲ ಪ್ರಚಾರದ ಮುಖ್ಯ ಪ್ರಶ್ನೆಯಾಗಿಯೇ ಉಳಿಯುತ್ತದೆ ವಿನಹ, ಕಾರ್ಯಾಚರಣೆಯ ಪ್ರಶ್ನೆಯಾಗಿ ರೂಪಾಂತರಗೊಳ್ಳಲು ಸಾಧ್ಯ.

ಈ ದಿಕ್ಕಿನಲ್ಲಿ ಶಕ್ತಿ ಕ್ರೋಢೀಕರಣ ಗ್ರಾಮಾಂತರ ಪ್ರದೇಶಗಳಲ್ಲಿ ಆಗುವ ಹಾಗೆ ನಾವು ರೈತ ರಂಗದಲ್ಲಿ ದುಡಿಯಬೇಕೆಂಬುದೇ ಅಖಿಲ ಭಾರತ ಕಿಸಾನ್ ಸಭೆಯ ನಿರ್ದೇಶನವಾಗಿದೆ. ●

'ಬರಿ ಕೊಡ' ಮೆರವಣಿಗೆ

ದಿನಾಂಕ 12-3-86 ಬುಧವಾರ ರಂದು ಅ. ಭಾ. ಪ್ರ. ಮಹಿಳಾ ಸಂಘಟನೆ ಮತ್ತು ಡಿ.ವೈ.ಎಫ್.ಐ ನ ಜಂಟಿ ನೇತೃತ್ವದಲ್ಲಿ ನಗರದ ದೊಡ್ಡ ಕೊಳಚೆ ಪ್ರದೇಶವಾದ ಚಂದ್ರಬಂಡಾ ಲೇಔಟ್‌ನ ಜನರ ನೀರಿನ ಸಮಸ್ಯೆಗಾಗಿ ಬರಿ ಕೊಡ ಮೆರವಣಿಗೆಯನ್ನು ನಡೆಸಲಾಯಿತು. ಸುಮಾರು ಇನ್ನೂರನ್ನೂ ಮಿಕ್ಕಿ ಗಂಡಸರು ಮತ್ತು ಹೆಂಗಸರು ಪಾಲ್ಗೊಂಡಿದ್ದ ಮೆರವಣಿಗೆಯು ನಗರಸಭೆಗೆ ಮತ್ತು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿತು.

ನಗರ ಸಭಾಯುಕ್ತರು ಮತ್ತು ನಗರಸಭಾಧ್ಯಕ್ಷರ ಜೊತೆ ಆದ ಮಾತುಕತೆಯ ಪ್ರಕಾರ ಮರುದಿನವೇ ಅವರು ಸ್ಥಳವೀಕ್ಷಣೆ ಮಾಡಿ ನೀರಿನ ಪೈಪನ್ನು ವಿಸ್ತರಿಸಿ ಹೆಚ್ಚಿನ ನಳಗಳನ್ನು ಒದಗಿಸುವುದಾಗಿ ಹೇಳಿದರು. ಇದರೊಂದಿಗೆ, ಕೊಳಚೆ ಪ್ರದೇಶದ ಸುತ್ತಮುತ್ತ ಹೊಸ ಬಡಾವಣೆಗಳು ಏಳುತ್ತಿದ್ದು ಮಹಿಳೆಯರಿಗೆ ಬಯಲು ಕಡೆಗೆ (ಸಂಡಾಸಿಗೆ) ಹೋಗಲು ಯಾವ ಮರೆಯೂ ಇಲ್ಲದಂತೆ ಆಗುತ್ತಿದೆ ಜೊತೆಗೆ ಬಡಾವಣೆಯ ಮಾಲೀಕರು ಕೂಲಿಗೆ ಜನವನ್ನಿಟ್ಟು ಸಂಡಾಸಿಗೆ ಹೋಗುವ ಮಹಿಳೆಯರಿಗೆ ಕಲ್ಲಿನಿಂದ ಹೊಡೆಸಲು ನೇಮಕ ಮಾಡಿರುವುದರಿಂದ, ತಮ್ಮ ತಮ್ಮ ಗುಡಿಸಲ ಮುಂದೆಯೇ ಬಹಿರ್ದೆಶೆಗೆ ಹೋಗುವ ಪರಿಸ್ಥಿತಿಯುಂಟಾಗಿರುವುದನ್ನು ವಿಷದಪಡಿಸಲಾಯಿತು ನಿಧಾನಗೊಳಿಸಿರುವ ಸಂಡಾಸಿನ ಕೆಲಸವನ್ನು ತೀವ್ರ ತೆಗೆದುಕೊಂಡು ಮುಗಿಸಬೇಕೆಂದು, ಇಲ್ಲದಿದ್ದಲ್ಲಿ ಜನಗಳ ಆಕ್ರೋಶವನ್ನು ಎದುರಿಸಬೇಕಾಗುವುದೆಂದೂ ಎಚ್ಚರಿಸಲಾಯಿತು.

ನಂತರ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾ| ರಾಘವೇಂದ್ರ ಕುಷ್ಟಗಿ ಜಿಲ್ಲಾ ಕಾರ್ಯದರ್ಶಿ ಡಿ ವೈ ಎಫ್. ಐ. ಮತ್ತು ಕಾ| ಹೇಣಿಕಕ್ಕೇರಿ, ಜಿಲ್ಲಾ ಕಾರ್ಯದರ್ಶಿ ಎ.ಐ.ಡಿ ಡಬ್ಲ್ಯು.ಎ. ಅವರು ಮಾತನಾಡಿ ಮಾತುಕತೆಯ ಸಾರಾಂಶವನ್ನು ತಿಳಿಸುತ್ತಾ, ಕೊಟ್ಟ ಸಮಯದಲ್ಲಿ ನಗರಸಭೆ ಮತ್ತು ಡಿ ಸಿ. ಕಾರ್ಯಾಲಯ ಕೆಲಸ ಕೈಗೊಳ್ಳದಿದ್ದ ಪಕ್ಷದಲ್ಲಿ, ಸಂಘಟಿತರಾದ ಜನ ಬೇಡಿಕೆಗಳನ್ನು ಈಡೇರಿಸಲು ತಮ್ಮ ಹೋರಾಟವನ್ನು ತೀಕ್ಷ್ಣಗೊಳಿಸುವುದಾಗಿ ಕರೆಕೊಟ್ಟರು.

ವಿಚಾರ ಸಂಕಿರಣ

ಕಾ| 16-3-86 ರಂದು, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸಿಂಧನೂರು ಘಟಕವು ಶಾಬಾನೂ ಪ್ರಕರಣಕ್ಕೆ ಸಂಬಂಧಿಸಿದ ಸುಪ್ರೀಂ ಕೋರ್ಟ್ ತೀರ್ಪಿನ ಬಗೆಗೆ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು.

"ಮಹಿಳೆಯ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಮೂಲಭೂತವಾದಿಗಳು" ಎನ್ನುವ ವಿಷಯವನ್ನು ಗಂಗಾಧರ ಕುಷ್ಟಗಿ ಮಂಡಿಸಿದರು. ಸುಪ್ರೀಂ ಕೋರ್ಟ್ ತೀರ್ಪು ಮತ್ತು ಶರೀಯತ್ ವಿಷಯವನ್ನು ಕಾ| ಶೇಖ್ ಶಾ ಖಾದ್ರಿ ಮಂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾ| ಹೇಣಿ ಕಕ್ಕೇರಿ ವಹಿಸಿದ್ದರು.

ಮೂಲಭೂತವಾದೀ ವಿದ್ಯಾರ್ಥಿ ಸಂಘಟನೆಯಾದ ಐ. ಎಸ್. ಓ.ದ ಕೆಲ ಸದಸ್ಯರು ಬಂದು ತನ್ನ ಪ್ರತಿಗಾಮೀ ವಿಚಾರಗಳನ್ನು ಮುಂದಿಟ್ಟು ವಿಚಾರ ಮಂಡಕರೊಟ್ಟಿಗೆ ವಾದಕ್ಕಿಳಿದಾಗ, ಚರ್ಚೆ ಬಿಸಿಯೇರಿ ಪ್ರಗತಿಪರ ವಿಚಾರಪರರೆಲ್ಲ ಅವರ ವಿರುದ್ಧ ಧ್ವನಿಯೆತ್ತುವಂತಹ ವಾತಾವರಣ ನಿರ್ಮಾಣವಾದುದು, ಮತ್ತು ಇದರಿಂದಾಗಿ ಮೂಲಭೂತವಾದಿಗಳ ಕುತರ್ಕದ ವಿಚಾರಗಳು ಬಹಿರಂಗಗೊಳ್ಳುವಂತಾದುದು ಗಮನೀಯ ಅಂಶ.

ಎಐಡಿಡಬ್ಲ್ಯುಎ ಪದಾಧಿಕಾರಿಗಳಾದ ಕಾ|| ಗಿರಿಜಾ ಕಿಲ್ಲೇದ್ ಸ್ವಾಗತ ಕೋರಿದರು. ಕಾ| ಪಾರ್ವತಿ ವಂದನಾರ್ಪಣೆ ಮಾಡಿದರು. ○

ಉಚಿತ ಬೋಧನಾ ತರಗತಿ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ ಎಫ್ ಐ) ಮೈಸೂರು ನಗರ ಸಮಿತಿಯ ಆಶ್ರಯದಲ್ಲಿ ಒಂದು ತಿಂಗಳ ಕಾಲ 10ನೇ ತರಗತಿಗಳ ವಿದ್ಯಾರ್ಥಿಗಳಿಗೆ ನಡೆದ ಉಚಿತ ಬೋಧನಾ ತರಗತಿಯ ಸಮಾರೋಪ ಸಮಾರಂಭವು 20-3-1986 ರಂದು ನಡೆಯಿತು

ಕೆ ಬಸವರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಉಚಿತವಾಗಿ ಬೋಧನೆ ನೀಡಿದ ಶಿಕ್ಷಕರುಗಳಿಗೆ ನೆನಪಿನ ಕಾಣಿಕೆ ಸಲ್ಲಿಸಲಾಯಿತು. ರಾಜ್ಯ ಎಸ್.ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್, ರಾಜ್ಯ ಸಮಿತಿ ಸದಸ್ಯೆ ತೇಜಸ್ವಿನಿ ಹಾಗೂ ಮೈಸೂರು ಜಿಲ್ಲಾ ಎಸ್. ಎಫ್. ಐ. ಮುಖಂಡರುಗಳಾದ ಎಸ್ ಆರ್ ಲೀಲಾವತಿ, ಶಿವಣ್ಣ, ಮುಕ್ಬುಲ್ ಅಹಮ್ಮದ್, ಕೃಷ್ಣ, ಚೆನ್ನಕೇಶವರವರುಗಳು ಮಾತನಾಡಿ ವ್ಯಾಪಾರೀಕರಣವಾಗಿರುವ ಶಿಕ್ಷಣ ನೀತಿಯ ಮೂಲಭೂತ ಬದಲಾವಣೆಗೆ ಹೋರಾಡುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸುಮಾರು 150 ವಿದ್ಯಾರ್ಥಿಗಳು 1 ತಿಂಗಳ ಕಾಲ ಇಂಗ್ಲೀಷ್, ಗಣಿತ, ವಿಜ್ಞಾನ ಮತ್ತು ಹಿಂದಿ ವಿಷಯಗಳಲ್ಲಿ ಉಚಿತ ಬೋಧನೆ ಪಡೆದರು.

ಅಂತರಾಷ್ಟ್ರೀಯ

ಖಾಲಿಸ್ತಾನೀ ಪ್ರತ್ಯೇಕತಾವಾದಿಗಳನ್ನು ತಡೆಯಲು ಬ್ರಿಟನ್ ಹಿಂಜರಿಕೆ

ಪಂಜಾಬಿನಲ್ಲಿ ಅಮಾಯಕ ಜನತೆಯ ಕಗ್ಗೊಲೆ ನಡೆಸುತ್ತಿರುವ ಖಾಲಿಸ್ತಾನೀ ಪ್ರತ್ಯೇಕತಾವಾದಿಗಳ ಬೆಂಬಲದ ಮೂಲ ಅಸಂಸ್ಥಾ. ಕೆನಡಾ ಹಾಗೂ ಬ್ರಿಟನ್ನಿನಲ್ಲಿ ಅವರ ಚಟುವಟಿಕೆಗಳಿಗೆ ದೊರೆತಿರುವ ಮುಕ್ತ ಅವಕಾಶವನ್ನುವುದು ಈಗ ಪ್ರತಿಯೊಬ್ಬ ಭಾರತೀಯನಿಗೂ ಗೊತ್ತಾಗಿರುವ ಅಂಶ. ಇಂದಿರಾಗಾಂಧಿಯವರ ಕೊಲೆಯಾದಾಗ ಅದನ್ನು ಸ್ವಾಗತಿಸಿ, ಖಾಲಿಸ್ತಾನೀ ಹಂತಕರ ಪಟ್ಟಿಯಲ್ಲಿರುವ ಇತರರ ಹೆಸರನ್ನು ಸಾರ್ವಜನಿಕವಾಗಿ ಘೋಷಿಸಲು ಸ್ವಯಂಘೋಷಿತ ಖಾಲೀಸ್ತಾನೀ ಮುಖಂಡನಿಗೆ ಬ್ರಿಟಿಶ್ ಸರಕಾರ ಪೂರ್ಣ ಅವಕಾಶ ನೀಡಿತ್ತು, ಉದಾರವಾದಿ ಸಿಖ್ಖರ ಮೆರವಣಿಗೆಗೆ ಸಾರ್ವಜನಿಕ ಭದ್ರತೆಯ ನೆಪವೊಡ್ಡಿ ಪರವಾನಿಗೆ ನೀಡದ್ದರಿಂ, ಖಾಲಿಸ್ತಾನಿಗಳ ಭಾರತ–ವಿರೋಧಿ ಮೆರವಣಿಗೆಗೆ ಅವಕಾಶ ನೀಡಲಾಯಿತು ಎಂಬುದು ಇನ್ನೂ ಭಾರತೀಯರಿಗೆ ನೆನಪಿದೆ.

ಬ್ರಿಟನ್ನಿನಲ್ಲಿ ಭಾರತ–ವಿರೋಧಿ ಚಟುವಟಿಕೆಗಳು ಹೆಚ್ಚುತ್ತಿರುವ ಹಾಗೂ ಅವನ್ನು ತಡೆಯಲು ತನ್ನ ದೇಶದ ಕಾನೂನುಗಳಲ್ಲಿ ಅವಕಾಶ ಇಲ್ಲವೆಂದು ತನ್ನ ಹೊಣೆ ತಪ್ಪಿಸಿಕೊಳ್ಳಲು ಬ್ರಿಟಿಶ್ ಟೋರಿ ಸರಕಾರ ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಭಾರತ ಸರಕಾರ ಇಂತಹ ವ್ಯಕ್ತಿಗಳನ್ನು ತನಗೊಪ್ಪಿಸಲು ಬ್ರಿಟನ್ ಹಾಗೂ ಭಾರತದ ನಡುವೆ ಒಂದು ಸಂಧಿಯೇರ್ಪಡಿಸುವ ಬಗ್ಗೆ ಒತ್ತಾಯಿಸುತ್ತಾ ಬರುತ್ತಿದ್ದು, ಬ್ರಿಟನ್ ಅದನ್ನು ಮುಂದೆ ತಳ್ಳುತ್ತಾ ಬಂದಿದೆ.

ಇತ್ತೀಚೆಗೆ ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ಸರ್ ಜಿಯೋಫ್ರೆ ಹೋವ್ ಭಾರತಕ್ಕೆ ಬಂದಾಗ ಭಾರತ ಸರಕಾರ ಈ ಬಗ್ಗೆ ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿ ಬ್ರಿಟನ್ನಿನ ನಿಲುವಿನಲ್ಲಿನ ಗೋಸುಂಬೆತನವನ್ನು ತೋರಿಸಿಕೊಟ್ಟಿರುವುದು ಸ್ವಾಗತಾರ್ಹ. ಖಾಲಿಸ್ತಾನೀ ಪ್ರತ್ಯೇಕತಾವಾದಿಗಳ ಚಟುವಟಿಕೆಗಳನ್ನು ತಡೆಯುವಲ್ಲಿ ಬ್ರಿಟನ್ ಸರಕಾರಕ್ಕೆ ಕೆಲವು ಕಾನೂನು ಕ್ರಮಗಳ ತೊಂದರೆಯಿರಬಹುದಾದರೂ ಇಂತಹ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವ ಕಾರ್ಯಾಂಗೀಯ ಅಧಿಕಾರ ಬ್ರಿಟನ್ ಸರಕಾರಕ್ಕಿದೆ. ಅದಕ್ಕೆ ಸೂಕ್ತ ರಾಜಕೀಯ ಇಚ್ಛೆ ಬೇಕಷ್ಟೆ. ಐ ಆರ್.ಎ ನ ಚಟುವಟಿಕೆಗಳನ್ನು ತಡೆಯಲು ಬ್ರಿಟಿಶ್ ಸರಕಾರ ತನ್ನ ಈ ಅಧಿಕಾರವನ್ನು ಧಾರಾಳವಾಗಿ ಬಳಸಿಕೊಂಡಿದೆ. ಇತ್ತೀಚೆಗೆ ಶ್ರೀಲಂಕಾದಿಂದ ಬಂದಿರುವ ಹಲವಾರು ನಿರಾಶ್ರಿತರಿಗೆ ಬ್ರಿಟನ್ ಪ್ರವೇಶಿಸಲು ಅನುಮತಿ ನಿರಾಕರಿಸಲು ಸಾಧ್ಯವಾಗಿದೆಯಾದರೆ ಹಿಂಸಾಚಾರ ಪ್ರತಿಪಾದಿಸುವ ಖಾಲಿಸ್ತಾನಿಗಳಿಗೆ ಏಕೆ ಪ್ರವೇಶ ನೀಡಲಾಗುತ್ತಿದೆ? ಶ್ರೀಲಂಕಾದಲ್ಲಿ ಅಮಾಯಕ ತಮಿಳು ಜನತೆಯ ವಿರುದ್ಧ ಮಿಲಿಟರಿ ಕಾರ್ಯಾಚರಣೆಗೆ ನೆರವಾಗಲು ತನ್ನ ಗೂಢಚಾರರ ನೆರವು ನೀಡಲು ಬ್ರಿಟನ್ನಿನ ಪ್ರಜಾಪ್ರಭುತ್ವ ಅವಕಾಶ ನೀಡುತ್ತದೆಯೋ?

ಭಯೋತ್ಪಾದಕರ ಚಟುವಟಿಕೆಗಳನ್ನು ನಿಲ್ಲಿಸಿ, ಅವರ ಸಂಘಟನೆಗಳನ್ನು ಮುಚ್ಚಿಸಿ ಅವರನ್ನು ಗಡೀಪಾರು ಮಾಡುವ ಅಧಿಕಾರ ಬ್ರಿಟಿಶ್ ಸರಕಾರಕ್ಕಿದೆ ಎಂದು ಭಾರತ ಸರಕಾರದ ಸ್ಪಷ್ಟ ಅಭಿಪ್ರಾಯವನ್ನು ತಳ್ಳಿಹಾಕಲಾರದ ಸರ್ ಹೋವ್‌ರವರು ಇದುವರೆಗೆ ಯುರೋಪಿನ ದೇಶಗಳಿಗೆ ಮಾತ್ರ ಅನ್ವಯವಾಗುತ್ತಿರುವ ಭಯೋತ್ಪಾದಕ ವಿರೋಧಿ ಕಾನೂನನ್ನು ಮೊತ್ತ ಮೊದಲ ಬಾರಿಗೆ ಬೇರೊಂದು ದೇಶಕ್ಕೆ ಅಂದರೆ ಭಾರತಕ್ಕೆ ಸಂಬಂಧಪಟ್ಟಂತೆಯೂ ಬಳಸುವ ಬಗ್ಗೆ ಯೋಚಿಸುವುದಾಗಿ ಹೇಳಬೇಕಾಗಿ ಬಂದಿದೆ. ಇದನ್ನು ನಿಜವಾಗಿಯೂ ಕಾರ್ಯರೂಪಕ್ಕೆ ಖಾಲಿಸ್ತಾನೀ ಪ್ರತ್ಯೇಕತಾವಾದಿಗಳ ಚಟುವಟಿಕೆಯ ಬ್ರಿಟಿಶ್ ಕೇಂದ್ರವನ್ನು ಥ್ಯಾಚರ್ ಸರ್ಕಾರ ಸ್ತಬ್ಧಗೊಳಿಸುತ್ತದೆಯೇ, ಎಂಬುದನ್ನು ಕಾದು ನೋಡಬೇಕಾಗಿದೆ.

○

ಲಿಬ್ಯಾ : ಇಸ್ರೇಲ್ ಅಮೇರಿಕಾದ ಏಕಮಾತ್ರ ಬೆಂಬಲಿಗ

ಸಿದ್ರಾ ಅಖಾತ ತನಗೆ ಸೇರಿದ್ದೆಂಬ ಲಿಬ್ಯಾದ ಘೋಷಣೆಗೆ ಸವಾಲು ಹಾಕಲು ಮೆಡಿಟರೇನಿಯನ್ ಸಮುದ್ರದಲ್ಲಿ ತನ್ನ ಆರನೇ ನಾವಿಕ ಪಡೆಯ ಕವಾಯತ್ತುಗಳನ್ನು ನಡೆಸಿ ಲಿಬ್ಯಾದ ನಾವಿಕ ಪಡೆಯ ಮೇಲೆ ಕ್ಷಿಪಣಿ ದಾಳಿ ನಡೆಸಿದ ಅಸಂಸ್ಥಾ ತನ್ನ ವಿರುದ್ಧ ಅಂತರಾಷ್ಟ್ರೀಯವಾಗಿ ವ್ಯಕ್ತಗೊಂಡ ತೀವ್ರ ಪ್ರತಿಕ್ರಿಯೆಯಿಂದಾಗಿ ಸಿದ್ರಾ ಅಖಾತದಿಂದ ದೂರ ಸರಿಯಬೇಕಾಯಿತು. ಈ ರೀತಿ ಹಿಂದೆ ಸರಿದ ನಂತರ ಕಳೆದ 28 ರಂದು ಅಸಂಸ್ಥಾದ ಗೃಹ ಕಾರ್ಯದರ್ಶಿ ಜಾರ್ಜ್ ಶುಲ್ಜ್‌ರು ಲಿಬ್ಯಾದ ಘೋಷಣೆಯನ್ನು ತನ್ನ "ಪರೀಕ್ಷಿಸುವ ಪ್ರಯತ್ನ"ಕ್ಕೆ ಎಲ್ಲಾ ಕಡೆಯಿಂದಲೂ ಬೆಂಬಲ ದೊರೆತಿದೆಯೆಂದು ಹೇಳಿಕೊಂಡಿದ್ದಾರೆ! ವಾಸ್ತವಕ್ಕೆ ಮಾತ್ರ ತದ್ವಿರುದ್ಧ. ಅಮೇರಿಕಾದ ಮಿತ್ರ ರಾಷ್ಟ್ರಗಳಾದ ಪಶ್ಚಿಮ ಯುರೋಪಿನ ದೇಶಗಳಲ್ಲಿ ಯಾವುದು ಕೂಡಾ ಅಮೆರಿಕಾದ ಕಾರ್ಯಾಚರಣೆಯನ್ನು ಬೆಂಬಲಿಸಲಿಲ್ಲ ಮಾತ್ರವಲ್ಲ.ಅದರ ಪರಿಣಾಮದ ಬಗ್ಗೆ ಸಂಶಯ ವ್ಯಕ್ತಪಡಿಸಿದವು. ಇಟೆಲಿ ಹಾಗೂ ಗ್ರೀಕ್ ಸರಕಾರಗಳಂತೂ ರೇಗನ್ ಆಡಳಿತದ ಈ ಉದ್ಧಟತನವನ್ನು ಖಂಡಿಸಿದವು. ಆಫ್ರಿಕಾದ ದೇಶಗಳು, ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್, ಸೋವಿಯತ್ ಸಂಘ, ಪೂರ್ವ ಯುರೋಪಿನ ಸಮಾಜವಾದಿ ದೇಶಗಳು, ಚೀಣಾ ಹಾಗೂ ಅಲಿಪ್ತ ಆಂದೋಲನ ಅಸಂಸ್ಥಾದ ಈ ಆಕ್ರಮಣವನ್ನು ಅಂತರಾಷ್ಟ್ರೀಯ ನಿಯಮಗಳ ಉಲ್ಲಂಘನೆಯೆಂದು ಖಂಡಿಸಿದವು. ಇತ್ತೀಚೆಗೆ ಆಫ್ರಿಕಾ ಖಂಡದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಗೆಳೆಯನಂತೆ ವರ್ತಿಸುತ್ತಿರುವ ಈಜಿಪ್ಟ ಕೂಡಾ ಲಿಬ್ಯಾದ ವಿರುದ್ಧ ದಾಳಿ ಮಾಡಬೇಕೆಂಬ ಅಸಂಸ್ಥಾದ ಕರೆಯನ್ನು ಮೂರು ಬಾರಿ ಸ್ಪಷ್ಟವಾಗಿ ನಿರಾಕರಿಸಿದೆ ಎಂದು ವರದಿಯಾಗಿದೆ. ರೇಗನ್ ಆಡಳಿತದ ಈ ದುಸ್ಸಾಹಸಕ್ಕೆ ಸ್ಪಷ್ಟ ಬೆಂಬಲ ದೊರೆತಿರುವುದು ಕೇವಲ ಇಸ್ರೇಲ್‌ನಿಂದ ಮಾತ್ರವೇ! ಕಾರಣ ಸುಸ್ಪಷ್ಟ.

ತಮ್ಮ ದೇಶದ ಸರ್ವಾಧಿಕಾರಿಗೆ ಸರ್ವ ಬೆಂಬಲ ನೀಡುತ್ತಿರುವ ಅಸಂಸ್ಥಾದ ಸಾಮ್ರಾಜ್ಯಶಾಹಿಗಳ ಕರಾಳತೆಯನ್ನು ಸ್ವತಃ ಅನುಭವಿಸುತ್ತಿರುವ ಪಾಕಿಸ್ತಾನದ ಪ್ರಜಾಪ್ರಭುತ್ವಪ್ರಿಯ ಜನತೆ ರೇಗನ್‌ರ ಈ ಉದ್ಧಟತನದ ವಿರುದ್ಧ ರಾಷ್ಟ್ರವ್ಯಾಪೀ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಲಾಹೋರ್, ಕರಾಚಿ ಹಾಗೂ ಇತರ ಹಲವೆಡೆ ಇದು "ಅಮೇರಿಕಾದ ಭಯೋತ್ಪಾದಕತನ" ಎಂದು ಖಂಡಿಸಿ ಅಮೆರಿಕನ್ ಬಾವುಟವನ್ನು, ಅಮೆರಿಕನ್ ನಾಯಕರ ಪ್ರತಿಮೆಗಳನ್ನೂ ಸುಡಲಾಗಿದೆ ಎಂದು ವರದಿಯಾಗಿದೆ. ಇತ್ತೀಚೆಗಷ್ಟೆ ಕರಾಚಿಯ ತೀರಕ್ಕೆ ಅಮೆರಿಕಾದ ಏಳನೇ ನಾವಿಕ ಪಡೆಯ "ಭೇಟಿ"ಯ ವಿರುದ್ಧ ಈ ದೇಶದಲ್ಲಿ ಸಾರ್ವತ್ರಿಕ ಪ್ರತಿಭಟನೆ ವ್ಯಕ್ತಗೊಂಡಿತ್ತು.

ಈ ಮಧ್ಯೆ ಲಿಬ್ಯಾದಲ್ಲಿ ಅಸಂಸ್ಥಾದ ಆಕ್ರಮಣಕ ನಿಲುವಿನ ಬಗ್ಗೆ ತನ್ನ ತೀವ್ರ ಕೋಪವನ್ನು ವ್ಯಕ್ತಪಡಿಸಿದ ಜನತೆ "ಅಮೆರಿಕಾದ ಮುಖಭಂಗ" ವನ್ನು ಅತ್ಯುತ್ಸಾಹದಿಂದ ಆಚರಿಸಿದೆ ಎಂದು ವರದಿಯಾಗಿದೆ.

●

ಸ್ವಾತಂತ್ರ್ಯ ದೇವಿ ಮತ್ತು ಅಮೇರಿಕಾ ಜನತೆ

ನ್ಯೂಯಾರ್ಕ್ ನಗರದ ಬಂದರಿನಲ್ಲಿರುವ 93 ಮೀಟರ್ ಎತ್ತರದ ಸ್ವಾತಂತ್ರ್ಯ ದೇವಿಯ ಪ್ರತಿಮೆಗೆ ಈ ಜುಲೈ 4 ರಂದು ನೂರು ವರ್ಷಗಳಾಗುತ್ತವೆ. ನೂರು ವರ್ಷಗಳ ಹಿಂದೆ ಫ್ರಾನ್ಸಿನ ಪ್ರಜಾಪ್ರಭುತ್ವ ಪ್ರೇಮಿಗಳು ಇದನ್ನು ಅಮೆರಿಕನ್ ಜನತೆಗೆ ಪಾರಿತೋಷಕವಾಗಿ ನೀಡಿದ್ದರು. ಶತಮಾನೋತ್ಸವ ಆಚರಣೆಗಾಗಿ ಈ ಪ್ರತಿಮೆಯ ಪುನರುಜ್ಜೀವನ ಕಾರ್ಯ ಮುಗಿಯುತ್ತಲಿದ್ದು, ಪ್ರತಿಮೆಯ ಒಂದು ಅಂಶ ಪರಿಣತರಿಗೆ ತಲೆನೋವುಂಟು ಮಾಡಿದೆಯಂತೆ. ಹಸಿರು ಬಣ್ಣದ ತಾಮ್ರದ ಪ್ರತಿಮೆಯ ಹಲವು ಭಾಗಗಳು ಕಪ್ಪಾಗುತ್ತಿವೆಯಂತೆ. ಹತ್ತಿರದ ಮ್ಯಾನ್‌ಹಟ್ಟನ್ ದ್ವೀಪದಿಂದ ಬಂದು ರಾಚುವ ಗಾಳಿಯಲ್ಲಿನ ಕೈಗಾರಿಕಾ ಆಮ್ಲದ ಪರಿಣಾಮದಿಂದ ಹೀಗಾಗುತ್ತಿದೆಯಂತೆ. ಇದನ್ನು ತಪ್ಪಿಸಲು ಏನು ಮಾಡಲೂ ಸಾಧ್ಯವಿಲ್ಲ ಎಂದು ಪರಿಣತರು ಅಭಿಪ್ರಾಯ ಪಡುತ್ತಿದ್ದಾರಂತೆ.

ಇದು ಸ್ವಾತಂತ್ರ್ಯ ದೇವಿಯ ಪ್ರತಿಮೆಯ ವಿಷಯವಾಯಿತು. ಆದರೆ ಈ ದೇಶದ ಆಳುವ ವಲಯಗಳು ತಮ್ಮ ಉದ್ಧಟ, ಯುದ್ಧಕೋರ ನೀತಿಯಿಂದಾಗಿ ಅಮೆರಿಕಾದ ಜನತೆಯ, ಅಮೆರಿಕಾದ ಪ್ರಜಾಪ್ರಭುತ್ವದ ಮುಖಕ್ಕೆ ಬಳಿಯುತ್ತಿರುವ ಮಸಿಯನ್ನು ನಿವಾರಿಸಲು ಏನಾದರೂ ಉಪಾಯ ಇದೆಯೇ? ವಿಯೆಟ್ನಾಂನಲ್ಲಿ ಎಪ್ಪತ್ತರ ದಶಕದಲ್ಲಿ ಹಚ್ಚಿಕೊಂಡ, ಕ್ಯೂಬಾದ ಮಾಜಿ ಸರ್ವಾಧಿಕಾರಿ ಬಾಟಿಸ್ಟಾ, ನಿಕಾರಗುವಾದ ಮಾಜಿ ಸರ್ವಾಧಿಕಾರಿ ಸೋಮೊಝಾ, ಇರಾನಿನ ಶಹಾ, ದಕ್ಷಿಣ ವಿಯೆಟ್ನಾಂ ಹಾಗೂ ದಕ್ಷಿಣ ಕೋರಿಯಾದ ಆಳರಸರು ಹಾಗೂ ಇತ್ತೀಚೆಗೆ ಹೈತಿಯ ಮಾಜಿ ಸರ್ವಾಧಿಕಾರಿಗೆ ಆಶ್ರಯ ನೀಡಿ ಉಳಿದುಕೊಂಡ, ಜಗತ್ತಿನಾದ್ಯಂತ ಪ್ರತಿಗಾಮಿ ಭಯೋತ್ಪಾದಕರಿಗೆ, ಪ್ರಜಾಪ್ರಭುತ್ವವನ್ನು ತುಳಿಯುತ್ತಿರುವ ಮಿಲಿಟರಿ ಸರ್ವಾಧಿಕಾರಿಗಳಿಗೆ, ಶಸ್ತ್ರಾಸ್ತ್ರ ಆರ್ಥಿಕಾದಿಯಾಗಿ ಸಕಲ ಬೆಂಬಲ ನೀಡಿ ಮೆತ್ತಿಕೊಂಡಿರುವ ಮಸಿಯನ್ನು ಒರೆಸಿ ಶುದ್ಧಗೊಳಿಸುವ ಲಕ್ಷಣಗಳೇನಾದರೂ ಕಾಣುತ್ತಿವೆಯೇ? ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಕಾರ್ಮಿಕ ವರ್ಗ ಹಾಗೂ ಪ್ರಜಾಪ್ರಭುತ್ವ ಪ್ರಿಯ ಜನತೆ ಇದಕ್ಕೆ ಉತ್ತರ ಕೊಡಬೇಕು. ನಿಕಾರಗುವಾದ ಕ್ರಾಂತಿಕಾರೀ ಸರ್ಕಾರದ ವಿರುದ್ಧ ಪ್ರತಿಗಾಮಿಗಳ ಕಾರ್ಯಾಚರಣೆಗೆ ಹಾಗೂ ಸಿ ಐ ಎ ತಲೆಹಾಕಲು ಅನುಕೂಲಮಾಡಿಕೊಳ್ಳಲು ರೇಗನ್ ಆಡಳಿತ ಕೇಳಿದ ಇದುವರೆಗಿನ 27 ಮಿಲಿಯ ಡಾಲರುಗಳ ನೆರವನ್ನು 100 ಮಿಲಿಯ ಡಾಲರುಗಳಿಗೆ ಏರಿಸುವ ಬೇಡಿಕೆಯನ್ನು ಅಮೆರಿಕಾದ ಪ್ರತಿನಿಧಿ ಸಭೆ ತಳ್ಳಿ ಹಾಕಿದಾಗ ಈ ಬಗ್ಗೆ ತುಸು ಆಸೆ ಮೂಡಿತ್ತು. ಈಗ ರಿಪಬ್ಲಿಕನರು ಬಹುಮತದಲ್ಲಿರುವ ಸೆನೆಟ್ ಅದನ್ನು 53-47 ಮತಗಳಿಂದ ಒಪ್ಪಿದೆ ಎಂಬ ಸುದ್ದಿ ಆ ಆಸೆಯನ್ನು ಮತ್ತೆ ಚಿವುಟಿ ಹಾಕಿದೆ. ಅಲ್ಲದೆ ಅಮೆರಿಕಾದ ಪ್ರಜಾಪ್ರಭುತ್ವ ಸಂಸ್ಥೆಗಳ ಆಶಯವನ್ನು ಬದಿಗೊತ್ತಿ ಅಲ್ಲಿನ ಆಳುವ ವಲಯಗಳು ಪ್ರಜಾಪ್ರಭುತ್ವದ, ಮಾನವತೆಯ ಮುಖಕ್ಕೆ ಮಸಿ ಬಳಿಯುವ ಕೆಲಸ ಮಾಡಿಕೊಂಡು ಬಂದ ಉದಾಹರಣೆಗಳೂ ಇವೆ. ಅಂದರೆ ಸದ್ಯದ ಮಟ್ಟಿಗಂತೂ ಸ್ವಾತಂತ್ರ್ಯ ದೇವಿಯ ಪ್ರತಿಮೆಯಲ್ಲಿ ಹರಡುತ್ತಿರುವ ಕರಿ ಛಾಯೆಯಂತೆ, ಅಮೆರಿಕಾದ ಜನತೆಗೆ ಆಳುವ ವಲಯಗಳು ಹಚ್ಚುತ್ತಿರುವ ಮಸಿಯನ್ನು ಕೂಡಾ ಅಳಿಸುವುದು ಕಷ್ಟಸಾಧ್ಯವೆನಿಸಿದೆ. ಆದರೆ ಸದಾ ಹೀಗೆ ಇರಲು ಸಾಧ್ಯವೂ ಇಲ್ಲ.

●

ಚಂದ್ರಗುತ್ತಿ ಪ್ರಕರಣ : ಡಿ.ವೈ.ಎಫ್.ಐ. ಖಂಡನೆ

ಸೊರಬ ತಾಲೂಕಿನ ಚಂದ್ರಗುತ್ತಿಯಲ್ಲಿ ಬೆತ್ತಲೆ ಸೇವೆಯನ್ನು ನಡೆಸದಂತೆ ಜನತೆಯನ್ನು ವಿನಂತಿ ಮಾಡುವವರು, ಪತ್ರಿಕೆ ವರದಿಗಾರರು, ಪೋಲೀಸರು ಇನ್ನಿತರರನ್ನು ಸ್ಥಾಪಿತ ಹಿತಾಸಕ್ತಿಯ ಗೂಂಡಾಗಳು ಒಳಗೊಂಡು ನಡೆಸಿದ ಅಮಾನವೀಯ ಹೇಯ ಹಲ್ಲೆಯನ್ನು ನಾಗರಿಕರೆಲ್ಲರು ತೀವ್ರವಾಗಿ ಖಂಡಿಸಬೇಕೆಂದೂ ಈ ಬಗ್ಗೆ ಸ್ವಕ್ಷೇತ್ರದವರಾದ ಕರ್ನಾಟಕ ವಿರೋಧ ಪಕ್ಷ ನಾಯಕ ಬಂಗಾರಪ್ಪನವರು ಹೇಳಿಕೆ ಕೊಡಬೇಕೆಂದೂ,

ಈ ಘಟನೆಯು ಭೂಮಾಲಕ ಪಾಳೆಯಗಾರಿ ಸಂಸ್ಕೃತಿಯ ಬೆಂಬಲಿಗ ರಾಜಕೀಯ ಪಕ್ಷ ಪಂಗಡಗಳ ಹೀನಾಯ ಕೃತ್ಯವೆಂದು ಅನುಮಾನವುಂಟಾಗುವುದರಿಂದ ಸಂಬಂಧಪಟ್ಟ ಇಲಾಖೆಗಳ ನಿಷ್ಕ್ರಿಯೆಯನ್ನು ಒಳಗೊಂಡಂತೆ ಇಡಿ ಘಟನೆಯನ್ನು ಶೀಘ್ರವಾಗಿ ನ್ಯಾಯಾಂಗ ತನಿಖೆಗೆ ಒಳಪಡಿಸಿ ವರದಿ ಬಹಿರಂಗ ಪಡಿಸಬೇಕೆಂದು ಡಿ. ವೈ. ಎಫ್. ಐ. ಮಂಗಳೂರು ತಾಲೂಕು ಸಮಿತಿ ತೀವ್ರವಾಗಿ ಒತ್ತಾಯಿಸಿದೆ.

○

ಡಿ. ವೈ. ಎಫ್. ಐ. ಸ್ಥಾಪನೆ

ಹಾಸನ ನಗರದ ಯುವಕರಿಲ್ಲಿ ಇತ್ತೀಚೆಗೆ ಸೇರಿ ಡಿ.ವೈ.ಎಫ್.ಐ ಘಟಕ ಸ್ಥಾಪಿಸಿ, [illegible]ರವರನ್ನು ಕಾರ್ಯದರ್ಶಿಯವರನ್ನಾಗಿ ನೇಮಿಸಿದೆ. ಸಭೆಗೆ ಆಗಮಿಸಿದ್ದ [illegible] ಅವರು ಸಂಘಟನೆಯ ಗುರಿ ಕಾರ್ಯಕ್ರಮಗಳನ್ನು ವಿವರಿಸಿದರು.

ಏಳು ದೋಷಗಳು

(1ನೇ ಪುಟದಿಂದ)

ಎರಡನೆಯದಾಗಿ

ನಿರ್ಣಯಗಳನ್ನು ಕೈಗೊಳ್ಳುವುದರಲ್ಲಿ, ಬೇಡಿಕೆಗಳನ್ನು ರೂಪಿಸುವುದರಲ್ಲಿ, ಹೋರಾಟ ಮಾಡುವುದರಲ್ಲಿ ಸಾಮಾನ್ಯ ರೈತರೂ ಪ್ರಜಾಸತ್ತಾತ್ಮಕವಾಗಿ ಭಾಗವಹಿಸುವಂತೆ ನಮ್ಮ ಚಟುವಟಿಕೆಗಳನ್ನು ಸಂಘಟಿಸದಿರುವುದು.

ಮೂರನೆಯದಾಗಿ

ಘೋಷಣೆಗಳು ನಮ್ಮ ವೈಯಕ್ತಿಕ ಅರಿವಿಗೆ ಅಂತೆ ಸರಿಯಾಗಿದ್ದರೂ, ರೈತರು ತಮ್ಮ ಪರಿಸ್ಥಿತಿಯ ಬಗ್ಗೆ ತಿಳಿದುಕೊಂಡಿರುವುದಕ್ಕೆ, ಅವರ ಪ್ರಜ್ಞೆಯ ಮಟ್ಟಕ್ಕೆ ಹೊಂದದಿರುವುದರಿಂದ, ಅವರನ್ನು ಬೃಹತ್ ಪ್ರಮಾಣದಲ್ಲಿ ನೆರೆಯಿಸಲು ತಪ್ಪುವುದು

ನಾಲ್ಕನೆಯದಾಗಿ

ನಮ್ಮ ಚಳುವಳಿ ಎದುರಿಸುತ್ತಿರುವ ವಾಸ್ತವ ಪರಿಸ್ಥಿತಿಯನ್ನು ಆಳವಾಗಿ ವಿಶ್ಲೇಷಣೆ ಮಾಡುವ, ವಿವರವಾದ ಅಂಕಿ ಸಂಖೆಗಳ ಸಂಗ್ರಹ ಮಾಡಿ ನಿಶ್ಚಿತ ವಿಷಯಗಳ ಬಗ್ಗೆ ಅಭ್ಯಾಸ ನಡೆಸುವ ತಾಪತ್ರಯಕ್ಕೆ ಹೋಗದಿರುವುದು

ಐದನೇಯದಾಗಿ,

ನಮ್ಮ ಕಾರ್ಯಕರ್ತರ ತರಬೇತಿ, ಬೆಳವಣಿಗೆಯನ್ನು ಉದಾಸೀನ ಮಾಡುವುದು

ಆರನೆಯದಾಗಿ,

ನಮ್ಮ ಜಿಲ್ಲಾ, ರಾಜ್ಯ, ಅಖಿಲ ಭಾರತ ಘಟಕಗಳು ಸರಿಯಾಗಿ ಕೆಲಸ ಮಾಡದಿರುವುದು. ಕೆಳಗಿನ ಅಥವಾ ಮೇಲಿನ ಘಟಕಗಳೊಂದಿಗೆ ಸಂಪರ್ಕ ಇರಿಸಿಕೊಳ್ಳದಿರುವುದು, ರೈತ ಸಂಘದ ಕಛೇರಿಯಿಲ್ಲದಿರುವುದು, ದಾಖಲೆಗಳನ್ನು, ಫೈಲುಗಳನ್ನಿಡದಿರುವುದು, ಬಡವರಿಗೆ ಸಹಾಯ ಮಾಡುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿಯಿಲ್ಲದಿರುವುದು ಇತ್ಯಾದಿ. ಮೂಲ ಘಟಕ (ಗ್ರಾಮಘಟಕ) ವಂತೂ ಕೆಲಸವನ್ನೇ ಮಾಡದಿರುವುದು

ಕೊನೆಯದಾಗಿ,

ಐಕ್ಯ ಕಾರ್ಯಾಚರಣೆಯ ಅಗತ್ಯ ಹಾಗೂ ಅವಕಾಶದ ಬಗ್ಗೆ ಅಸಮರ್ಪಕ ತಿಳುವಳಿಕೆ ನಮ್ಮ ಸಂಘಟನೆಯ ಪ್ರಮುಖ ದೋಷಗಳಲ್ಲೊಂದು. ಈ ಬಗ್ಗೆ ಬಹಳಷ್ಟು ಪಂಥವಾದವಿದೆ – ತಾತ್ಕಾಲಿಕವಾಗಿ ಮೂಡಿ ಬಂದ ಚಳುವಳಿಗಳ ಬಗ್ಗೆ, ಇತರ ರೈತ ಸಂಘಟನೆಗಳ ಬಗ್ಗೆ.

ಪ್ರಾಂತ ರೈತ ಸಂಘದ ಎಂಟನೇ ರಾಜ್ಯ ಸಮ್ಮೇಳನ

[ನೇ ಪುಟದಿಂದ]

ಸ್ಥಗಿತವಾಗಿರುವುದರ ಮುಖ್ಯವಾಗಿ ಕೃಷಿಕ್ಷೇತ್ರ ಸ್ಥಗಿತವಾಗಿರುವುದರ ಹಿನ್ನೆಲೆಯಲ್ಲಿ, ಈ ಸ್ಥಗಿತ ಬೆಳವಣಿಗೆಯ ಫಲವಾಗಿ ರೈತರು ಭೂಮಿಯನ್ನು ಕಳೆದುಕೊಂಡು ಭೂಹೀನರಾಗುತ್ತಿರುವ ಹಿನ್ನೆಲೆಯಲ್ಲಿ, ಹೀಗೆ ದಿನೇ ದಿನೇ ಹೆಚ್ಚುತ್ತಿರುವ ಕೃಷಿಕಾರ್ಮಿಕರ ಅಪಾರ ಸಮುದಾಯಕ್ಕೆ ಕೆಲಸ, ಯೋಗ್ಯ ಕೂಲಿ ದೊರೆಯದ, ಅಗ್ಗದ ದರದಲ್ಲಿ ಆಹಾರ ನಿಲ್ಲಲೊಂದು ನೆಲೆ, ತಲೆಯ ಮೇಲೊಂದು ಸೂರು ದೊರಕದ ಈ ಪರಿಸ್ಥಿತಿಯಲ್ಲಿ ನಮ್ಮ 8ನೇ ರಾಜ್ಯ ಸಮ್ಮೇಳನವು ಸೇರುತ್ತಿದೆ. ಇದರ ಮೇಲೆ 3ವರ್ಷಗಳ ಕಾಲ ಸತತ ಬರಗಾಲವನ್ನನುಭವಿಸಿ, ಕೇಂದ್ರ ಸರಕಾರ ರಾಜ್ಯ ಸರ್ಕಾರಕ್ಕೆ ಹಣ ನೀಡದೆ, ಸರಿಯಾಗಿ ರಾಜ್ಯ ಸರ್ಕಾರ ರಾಜ್ಯದ ಕೃಷಿ ಕಾರ್ಮಿಕರಿಗೆ ಕೆಲಸ ನೀಡದೆ, ಲಕ್ಷಾಂತರ ರೈತರು ಬರ ಪೀಡಿತ ಪ್ರದೇಶದಿಂದ ಗುಳೇ ಹೋಗಿ ಹಳ್ಳಿಗಳು ಬಿಕೋ ಎನ್ನುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸಮ್ಮೇಳನ ಸೇರುತ್ತಿದೆ

ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂಸುಧಾರಣೆಯ ಬಗ್ಗೆ, ಕೃಷಿ ಕಾರ್ಮಿಕರಿಗೆ ಅಖಿಲ ಭಾರತ ಕಾನೂನು ರಕ್ಷಣೆಯ ಬಗ್ಗೆ ರೈತರಿಗೆ ಲಾಭದಾಯಕ ಬೆಲೆ, ಬೆಂಬಲ ಬೆಲೆಯ ಬಗ್ಗೆ ಚಕಾರವೆತ್ತಿಲ್ಲ

ದೇಶ ವಿಭಜಕ ಶಕ್ತಿಗಳು

ಹೀಗೆ ಕೃಷಿಪರಿಸ್ಥಿತಿ, ಬಂಡವಾಳಶಾಹಿ ಭೂಮಾಲೀಕರ ಆಘಾತದಿಂದ ಹದಗೆಡುತ್ತಿರುವಾಗಲೇ ತಮ್ಮ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ರೈತಾಪಿ ಜನತೆ ಹೋರಾಟ ಮಾಡುತ್ತಿರುವಾಗಲೇ, ಪಂಜಾಬ್‌ನಲ್ಲಿ, ಅಸ್ಸಾಂನಲ್ಲಿ ಮತೀಯ, ಭಾಷಾದ್ವೇಷದ ಕಿಚ್ಚನ್ನು ಹರಡಿ ಅವರನ್ನು ವಿಭಜಿಸುವ. ತಮ್ಮ ಜೀವನದ ಉತ್ತಮ ಮಟ್ಟಕ್ಕಾಗಿ, ಭೂಮಿಗಾಗಿ, ಕೂಲಿಗಾಗಿ, ಉತ್ತಮ ಲಾಭದಾಯಕ ಬೆಲೆಗಾಗಿ, ಸಾಲ ವಿಮೋಚನೆಗಾಗಿ ಹೋರಾಡುವ ಬದಲು ಸಿಖ್ ತೀವ್ರವಾದಿ, ಕೋಮುವಾದಿ ಎಂದು, ಸಿಖ್– ಹಿಂದೂ ಎಂದು ವಿಭಜಿತವಾಗಿದ್ದಾರೆ, ಅಸ್ಸಾಮೀಯರು ಗಿರಿಜನರು, ಪರರಾಜ್ಯದವರು ಎಂದು ವಿಭಜಿತವಾಗಿದ್ದಾರೆ.

ಅದೇ ಸಮಯದಲ್ಲಿಯೇ ನಮ್ಮ ರಾಜ್ಯದಲ್ಲಿಯೂ ಜನತಾ ಸರ್ಕಾರದ ಮುಖ್ಯಮಂತ್ರಿಯವರು ಎರಡು ಭಾರತ, ನಗರ–ಗ್ರಾಮಗಳ ಜನತೆ ನಿರಾವರಿ – ಒಣಬೇಸಾಯದ ರೈತರು ಎಂದು ರೈತ ಸಮುದಾಯವನ್ನು ದುಡಿಯುವ ಜನ ಸಮುದಾಯವನ್ನು ವಿಭಜಿಸುವ ಪ್ರಯತ್ನ ನಡೆದಿದೆ.

ರೈತ ಸಂಘದ ಹೋರಾಟಗಳು

ಪ್ರಾಂತ ರೈತ ಸಂಘವು ಕುಸಿಯುತ್ತಿರುವ ಈ ಪರಿಸ್ಥಿತಿಯ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಿದೆ. ಆ ಮೂಲಕ ಬಲವಾಗಿ ಬೆಳೆದಿದೆ. ದರಖಾಸ್ತು ಭೂಮಿಗಾಗಿ ನಡೆದ ಜುಲೈ 11, 84 ರ ಹೋರಾಟ ಬರಗಾಲ ಪರಿಹಾರಕ್ಕಾಗಿ ಎಲ್ಲೆಡೆಯೂ ರೈತ ಸಂಘದ ಘಟಕಗಳು ನಡೆಸಿದ ಹೋರಾಟ, ಭೂ ಸುಧಾರಣೆಯಲ್ಲಿನ ಅನ್ಯಾಯ, ಭ್ರಷ್ಟಾಚಾರ ತಡೆಗಟ್ಟುವುದಕ್ಕಾಗಿ ಮತ್ತಿತರ ಹೋರಾಟಗಳು ಸ್ಮರಣೀಯ. ಕರ್ನಾಟಕದಲ್ಲಿ ನಡೆದ ಚುನಾವಣೆಗಳಲ್ಲಿ ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸಿ ಜನತಾ ಸರ್ಕಾರವನ್ನು ತರಲು, ಮತ್ತಿತರ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಕ್ರಿಯಾಶೀಲ ಚಟುವಟಿಕೆಗಳು ಎಲ್ಲಾ ರೈತ ಸಂಘದ ಬೆನ್ನ ಹಿಂದಿವೆ.

ಈ ಎಲ್ಲಾ ಅಂಶಗಳಲ್ಲಿ ಕೇಂದ್ರದ ಕಾಂಗ್ರೆಸ್ ಸರಕಾರದ ರೈತ ವಿರೋಧಿ ನೀತಿಯನ್ನು ಹಾಗೆಯೇ ರಾಜ್ಯದ ಪರಿಸ್ಥಿತಿಯನ್ನು ವಿಶ್ಲೇಷಿಸಿ, ಚರ್ಚಿಸಿ ಸೂಕ್ತ ನಿರ್ಣಯಗಳಿಗೆ ಬರಬೇಕಾಗಿದೆ. ಹದಗೆಡುತ್ತಿರುವ ಪರಿಸ್ಥಿತಿಯಲ್ಲಿ, ಕಂಗಾಲಾದ ಇಡೀ ಗ್ರಾಮೀಣ ಜನತೆಯನ್ನು ಸಂಘಟಿಸಿ, ಹುರಿದುಂಬಿಸಿ ಹೋರಾಟಕ್ಕೆ ಹೆಚ್ಚು ಬಲ್ಲ ಸುಧೃಡ ಸಮರಧೀರ ಸಂಘಟನೆಯನ್ನು ಕಟ್ಟಬೇಕಾಗಿದೆ. ಅಖಿಲ ಭಾರತ ಕಿಸಾನ್ ಸಭಾ ನಡೆದಿರುವ ಧೀರ ಹಾದಿಯಲ್ಲಿ ಮುನ್ನಡೆಯುವ, ಬೃಹತ್ ರೈತ ಚಳುವಳಿಯನ್ನು ರೂಪಿಸುವ ಹೊಣೆ ನಮ್ಮೆಲ್ಲರ ಮೇಲಿದೆ ●

ಸಿ. ಐ. ಟಿ. ಯು. ಕೇಂದ್ರ ಮಂಡಲಿ ಕರೆ

(1ನೇ ಪುಟದಿಂದ)

ದೇಶದ ಇಡೀ ಸಾಮಾಜಿಕ ಜೀವನವನ್ನು ಹಬ್ಬಿ ಹೊಲಸು ಗೆಡಿಸುತ್ತಿರುವ ಭ್ರಷ್ಟಾಚಾರದ ದುರ್ವಾಸನೆಯ ವಿರುದ್ಧ ಹೋರಾಡಲು ಕರೆನೀಡಿದರು.

ಸಾರ್ವಜನಿಕ ಉದ್ಯಮಗಳು

ಕೆಲಸಗಾರರ ದೊಡ್ಡ ವಿಭಾಗ ಹಿಂದೆ, ಸಾರ್ವಜನಿಕ ವಲಯ ಹೇಗೆ ಕೆಲಸ ಮಾಡಿದರೇನು ? ಸರ್ಕಾರ ಅವುಗಳ ಬಗ್ಗೆ ಏನು ಮಾಡಿದರೇನು ? ಎನ್ನುವಂತೆ ವರ್ತಿಸಿದೆ. ಇದು ತಪ್ಪು ದೃಷ್ಟಿಕೋನ. ಬ್ರಿಟನ್ನಿನಂತಹ ದೇಶದಲ್ಲಿ ಸಾರ್ವಜನಿಕ ವಲಯ, ಖಾಸಗೀ ವಲಯ ಎರಡೂ ಸಾಮ್ರಾಜ್ಯಶಾಹಿಯ ಸಾಧನಗಳೇ. ಆದರೆ ಹೊಸದಾಗಿ ವಿಮೋಚನೆಗೊಂಡ ಭಾರತದಂತಹ ದೇಶಗಳಲ್ಲಿ ಸಮರ್ಥವಾಗಿ ನಿರ್ವಹಿಸಿದ ಆಯಕಟ್ಟಿನ ಕೈಗಾರಿಕೆಯ ಮೇಲೆ ಆಧಾರಿತ ಸಾರ್ವಜನಿಕ ವಲಯ ಸಾಮ್ರಾಜ್ಯಶಾಹಿ ಕುತಂತ್ರಗಳ ವಿರುದ್ಧ, ಅವರ ಮೇಲೆ ಅವಲಂಬನೆಯ ವಿರುದ್ಧ ರಕ್ಷಣೆಯ ಸಾಧನ. ಅನೇಕ ದುರ್ವ್ಯವಹಾರ ನಡೆದರೂ ಕೂಡ ಸಾರ್ವಜನಿಕ ವಲಯ ನಮ್ಮ ಆರ್ಥಿಕದ ಸ್ವಾವಲಂಬನೆಗೆ ದೊಡ್ಡ ಕಾಣಿಕೆ ನೀಡಿದೆ. ಈ ವಿಷಯವನ್ನು ಕಾರ್ಮಿಕ ಸಂಘಗಳು ನಮ್ಮ ಕಾರ್ಮಿಕರ ಮುಂದಿಟ್ಟಿಲ್ಲ.

ಸಂಗಾತಿಗಳೇ, ರಾಜೀವ ಗಾಂಧಿಯವರ ಹೊಸ ನೀತಿಯಲ್ಲಿ ಸಾರ್ವಜನಿಕ ವಲಯವನ್ನು ಬೀಳು ಗಳೆಯುವುದು ಮಾತ್ರ ಅಲ್ಲ ತಾಂತ್ರಿಕ, ನಿರ್ವಹಣೆಯ ಆಡಳಿತವನ್ನು ವಿದೇಶಿ ಕಂಪನಿಗಳಿಗೆ ನೀಡುವುದರಲ್ಲಿ ಕೊನೆಯಾಗುವಂತಿದೆ. ಪತ್ರಿಕೆಗಳಲ್ಲಿ ಬರುತ್ತಿರುವ ವರದಿಯನ್ನು ನೋಡಿದ ವಿದೇಶಿ ಬಹುರಾಷ್ಟ್ರೀಯಗಳು ಸಾರ್ವಜನಿಕ ವಲಯವನ್ನು ಪ್ರವೇಶಿಸುವ ಕ್ರಿಯೆ ಈಗಾಗಲೇ ಆರಂಭವಾಗಿದೆ ಎಂದರು.

ಸಿ.ಐ.ಟಿ.ಯು ಕೇಂದ್ರ ಮಂಡಲಿ ಇತರ ಕಾರ್ಮಿಕ ಸಂಘಗಳೊಡಗೂಡಿ ದೇಶಾದ್ಯಂತ, ರಾಷ್ಟ್ರದ ಸಮಗ್ರತೆಯ ರಕ್ಷಣೆಗೆ, ಯುದ್ಧಾಪಾಯದ ವಿರುದ್ಧ, ದ. ಆಫ್ರಿಕದ ವರ್ಣವಿದ್ವೇಶದ ವಿರುದ್ಧ ದಿನಾಚರಣೆಯ ಕಾರ್ಯಕ್ರಮ ಹಾಕುವುದರೊಂದಿಗೆ, ಮೇ 21 ರಂದು ಸಾರ್ವಜನಿಕ ವಲಯವನ್ನು ರಕ್ಷಿಸಿ ಎಂಬ ಕರೆ ನೀಡಿದೆ ಮೇ ದಿನದ "ವಿಶ್ವಶಾಂತಿ ಹಾಗೂ ಉದ್ಯೋಗದ ಹಕ್ಕು" ಎಂಬ ಕರೆ ಮೊಳಗುವುದರೊಂದಿಗೆ ಈ ಎಲ್ಲಾ ಕರೆಗಳೂ ಭಾರತದ ಕಾರ್ಮಿಕರ, ಕರ್ನಾಟಕದ ಕಾರ್ಮಿಕರ ಮನೋಮಂಡಲವನ್ನು, ಪ್ರಜ್ಞಾವಲಯವನ್ನು ಆವರಿಸಬೇಕು

ಕಾ॥ ಬಿ. ಟಿ. ಆರ್. ರವರಿಂದ....
ನೆಲ್ಸನ್ ಮಂಡೇಲಾ ರವರಿಗೆ ಶುಭಾಶಯಗಳು

ದಕ್ಷಿಣ ಆಫ್ರಿಕದ ವರ್ಣದ್ವೇಶ ನೀತಿಯ ವಿರುದ್ಧ ಹೋರಾಡುತ್ತಿರುವ ಧೀರ ನಾಯಕ ನೆಲ್ಸನ್ ಮಂಡೇಲಾರವರಿಗೆ ನಿಮ್ಮ ಪರವಾಗಿ ಶುಭಾಶಯಗಳನ್ನು ಕೋರುತ್ತೇನೆ ಎರಡು ದಶಕಗಳ ಕಾಲ ಸೆರೆಮನೆಯಲ್ಲಿ ನರಳಿದರೂ ಮಣಿಯದ ಸ್ಥೈರ್ಯ ನೂರಾರು ಸಾವಿರ ಜನರಿಗೆ ಬೋಥಾರವರ ಫ್ಯಾಸಿಸ್ಟ್ ಅಧಿಕಾರದ ವಿರುದ್ಧ ಹೋರಾಟದ ಸ್ಫೂರ್ತಿಯ ಸೆಲೆಯಾಗಿದೆ. ಜೈಲಿನ ಗೋಡೆಗಳನ್ನು ಸೆರೆಮನೆಯ ಉಕ್ಕಿನ ಸರಳುಗಳನ್ನು ಅವರ ಧ್ವನಿ ಬೇಧಿಸಿ ನಿರಂತರವಾಗಿ ಮೊಳಗುತ್ತಿದೆ. ಅವರನ್ನು ತುಳಿಯುವವರಿಗೊಂದು ಸವಾಲಾಗಿದೆ. ಸಾಮ್ರಾಜ್ಯಶಾಹಿ ಶಕ್ತಿಗಳ ಬಹಿರಂಗ– ಅಂತರಂಗ ಬೆಂಬಲ ಅವರಲ್ಲಿಯೂ ಅತ್ಯಂತ ನಾಚಿಕೆಗೇಡಿನ, ದಾಷ್ಟ್ಯದ ವರ್ತನೆ ತೋರುತ್ತಿರುವ ರೀಗನ್‌ರ ಆಸಂಸ್ಥಾ ಸರ್ಕಾರವನ್ನು ಎಲ್ಲರೂ ರೋಷದಿಂದ, ದ್ವೇಷದಿಂದ ಖಂಡಿಸಬೇಕು. ತಮ್ಮ ಜನರನ್ನು ಸರಪಳಿಯಿಂದ ಬಂಧಿಸಿರುವವರ ವಿರುದ್ಧ ಹೋರಾಡುತ್ತಿರುವ ನೆಲ್ಸನ್ ಮಂಡೇಲಾರವರ ಸ್ಥೈರ್ಯವಂತಿಕೆಗೂ ನಮ್ಮ ಶುಭಾಶಯವನ್ನು ಕೋರುತ್ತೇನೆ.

ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಭೆ

20-3-1986 ರಂದು ಮೈಸೂರಿನಲ್ಲಿ ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘದ (ಸಿ ಐ ಟಿ ಯು.) ಸರ್ವಸದಸ್ಯರ ಸಭೆಯು ನಡೆಯಿತು.

ಇತ್ತೀಚಿನ ಚುನಾವಣೆಯಲ್ಲಿ ಆಯ್ಕೆಯಾದ ನೂತನ ಪದಾಧಿಕಾರಿಗಳು ಸಭೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಸಂಘದ ಕಾನೂನು ಸಲಹೆಗಾರರಾದ ಕಾ॥ ಸೂರ್ಯನಾರಾಯಣ ರಾವ್ ರವರು ಸಭೆಯಲ್ಲಿ ಮಾತನಾಡಿ ಕಾರ್ಮಿಕರು ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುವುದರೊಂದಿಗೆ ಸಮಾಜ ಬದಲಾವಣೆ ಬಗ್ಗೆ ಗಮನ ನೀಡಲು ಕರೆ ನೀಡಿದರು. ಮೇ ದಿನದ ಶತಮಾನೋತ್ಸವವನ್ನು ಯಶಸ್ವಿಗೊಳಿಸಲು ಹಾಗೂ ಬರ ಪರಿಹಾರಕ್ಕೆ 1 ದಿನದ ವೇತನ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560053 Editorial and managerial office, L-56, K. V. Temple Street, Sultanpet, B-53 Phone : 78331
Editor P. Ramachandra Rao Managing Editor : N.K. Upadhyaya